**<u>ಹಿರಿಯ ವ್ಯವಹಾರಿಕ ನ್ಯಾಯಾಲಯ, ಅಫಜಲಪೂರ</u>**

**ಪ್ರಸ್ತುತಃ ರಮೇಶ ದುರುಗಪ್ಪ ಏಕಬೋಟೆ,**
**ಬಿ.ಎಸ್ ಸಿ, ಎಂ.ಎ. ಎಲ್ ಎಲ್ ಬಿ.,**

**ಹಿರಿಯ ವ್ಯವಹಾರಿಕ ನ್ಯಾಯಾಧೀಶರು,**
**ಅಫಜಲಪೂರ**

**<u>ದಿನಾಂಕಃ 28 ನೇ ಸೆಪ್ಟೆಂಬರ್ 2018</u>**

**<u>ಅಸಲು ದಾವಾ ಸಂಖ್ಯೆಃ 14/2017</u>**

**<u>ವಾದಿಯರುಃ</u>**

1. ಬಸಣ್ಣಾ ತಂದೆ ಮಡಿವಾಳಪ್ಪಾ ಧನಶೆಟ್ಟಿ,
ವಯಸ್ಸುಃ 54 ವರ್ಷಗಳು, ಉದ್ಯೋಗಃ ಒಕ್ಕಲುತನ,

2. ಸಿದ್ದಪ್ಪಾ ತಂದೆ ಮಡಿವಾಳಪ್ಪಾ ಧನಶೆಟ್ಟಿ,
ವಯಸ್ಸುಃ 62 ವರ್ಷಗಳು, ಉದ್ಯೋಗಃ ಒಕ್ಕಲುತನ,

3. ಶ್ರೀಮತಿ ಕಾಶಿಬಾಯಿ ಗಂಡ ಲೇಟ ನಾಗಪ್ಪಾ ಕಲ್ಯಾಣ
ತಂದೆ ಮಡಿವಾಳಪ್ಪಾ ಧನಶೆಟ್ಟಿ,
ವಯಸ್ಸುಃ 58 ವರ್ಷಗಳು, ಉದ್ಯೋಗಃ ಮನೆಗೆಲಸ,

4. ಶಿವಶರಣ ತಂದೆ ಮಡಿವಾಳಪ್ಪಾ ಧನಶೆಟ್ಟಿ,
ವಯಸ್ಸುಃ 45 ವರ್ಷಗಳು, ಉದ್ಯೋಗಃ ಸರ್ವಿಸ್/ ಒಕ್ಕಲುತನ,

5. ಶ್ರೀಮತಿ ಅನ್ನಪೂರ್ಣಾ ಗಂಡ ಈರಣ್ಣಾ ಧನಶೆಟ್ಟಿ,
ವಯಸ್ಸುಃ 45 ವರ್ಷಗಳು, ಉದ್ಯೋಗಃ ಮನೆಗೆಲಸ,

6. ಶ್ರೀಮತಿ ಶೈಲಾ ತಂದೆ ಈರಣ್ಣಾ ಧನಶೆಟ್ಟಿ,
ವಯಸ್ಸುಃ 25 ವರ್ಷಗಳು, ಉದ್ಯೋಗಃ ಮನೆಗೆಲಸ,

7. ಶ್ರೀಮತಿ ವೈಶಾಲಿ ತಂದೆ ಈರಣ್ಣಾ ಧನಶೆಟ್ಟಿ,
ವಯಸ್ಸುಃ 22 ವರ್ಷಗಳು, ಉದ್ಯೋಗಃ ಮನೆಗೆಲಸ,

8. ಮಹಾಂತ ತಂದೆ ಈರಣ್ಣಾ ಧನಶೆಟ್ಟಿ,
ವಯಸ್ಸುಃ 20 ವರ್ಷಗಳು, ಉದ್ಯೋಗಃ ಸರ್ವಿಸ್

ಎಲ್ಲರೂ ಸಾಃ ನಾಗಣಸೂರ ಗ್ರಾಮ,
ತಾಃ ಅಕ್ಕಲಕೋಟ, ಜಿಃ ಸೊಲಾಪೂರ (ಎಮ್.ಎಸ್.)

**(ವಾದಿಯರ ಪರ ಶ್ರೀ ಎಸ್.ಕೆ. ಪೂಜಾರಿ, ವಕೀಲರು)**

**ಃ ವಿರುದ್ಧಃ**

**ಪ್ರತಿವಾದಿಯರು**ಃ

1. ಶೆಟ್ಟೆಪ್ಪಾ ತಂದೆ ಚಂದ್ರಶ್ಯಾ ಧನಶೆಟ್ಟಿ,
ವಯಸ್ಸುಃ 58 ವರ್ಷಗಳು, ಉದ್ಯೋಗಃ ಒಕ್ಕಲುತನ,
ಸಾಃ ಉಡಗಿ, ತಾಃ ಅಕ್ಕಲಕೋಟ, ಜಿಃ ಸೋಲಾಪೂರ.

2. ಸೂರ್ಯಕಾಂತ ತಂದೆ ಚಂದ್ರಶ್ಯಾ ಧನಶೆಟ್ಟಿ,
ವಯಸ್ಸುಃ 50 ವರ್ಷಗಳು, ಉದ್ಯೋಗಃ ಒಕ್ಕಲುತನ,
ಸಾಃ ನಾಗಣಸೂರ, ತಾಃ ಅಕ್ಕಲಕೋಟ,
ಜಿಃ ಸೊಲಾಪೂರ (ಎಮ್.ಎಸ್)

**(ಪ್ರತಿವಾದಿಯರ ಪರವಾಗಿ ಶ್ರೀ ಡಿ.ಡಿ. ದೇಶಪಾಂಡೆ, ವಕೀಲರು)**

| | | |
|---|---|---|
| 1. | ದಾವೆ ಸಲ್ಲಿಸಿದ ದಿನಾಂಕ | 03-08-2017 |
| 2. | ದಾವೆಯ ಸ್ವರೂಪ | ಮಾಲೀಕತ್ವದ ಹಕ್ಕು ಮತ್ತು ಸ್ವಾಧೀನದ ಘೋಷಣೆಗಾಗಿ ಮತ್ತು ಶಾಶ್ವತ ನಿರ್ಬಂಧಕಾಜ್ಞೆಗಾಗಿ ಆದೇಶಕ್ಕಾಗಿ. |
| 3. | ದಾವೆಯಲ್ಲಿ ವಿಚಾರಣೆ ಪ್ರಾರಂಭವಾದ ದಿನಾಂಕ | 14-11-2017 |
| 4. | ದಾವೆ ಇತ್ಯರ್ಥವಾದ ದಿನಾಂಕ | 28-09-2018 |
| 5. | ಒಟ್ಟು ಅವಧಿ | <u>ವರ್ಷ</u> <u>ತಿಂಗಳು</u> <u>ದಿನ</u><br>01 01 25 |

## ತೀರ್ಪು

ವಾದಿಯರು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾಸ್ತಿಗಳ ತಮ್ಮ ಮಾಲೀಕತ್ವದ ಹಕ್ಕನ್ನು ಹಾಗೂ ಸ್ವಾಧೀನವನ್ನು ಘೋಷಿಸುವಂತೆ ಹಾಗೂ ತಮ್ಮ ದಾವಾಸ್ತಿಗಳ ಸ್ವಾಧೀನಾನುಭವಕ್ಕೆ ತೊಂದರೆ ಪಡಿಸದಂತೆ ಪ್ರತಿವಾದಿಯರನ್ನು ಶಾಶ್ವತ ನಿರ್ಬಂಧಕಾಜ್ಞೆ ಆದೇಶದ ಮುಖಾಂತರ ನಿರ್ಬಂಧಿಸಬೇಕೆಂದು ಹಾಗೂ ನ್ಯಾಯಾಲಯವು ಪರಿಗಣಿಸುವ ಇತರ ಪರಿಹಾರದೊಂದಿಗೆ ದಾವೆಯನ್ನು ಖರ್ಚು ಸಹಿತ ಡಿಕ್ರಿಗೊಳಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. ದಾವಾಸ್ತಿಯ ವಿವರಣೆಯು ಈ ಕೆಳಗಿನಂತಿದೆಃ

**ಎ. ಅಫಜಲಪೂರ ತಾಲೂಕಿನ ಮಾಶಾಳ ಗ್ರಾಮದಲ್ಲಿರುವ ಜಮೀನು ಸರ್ವೆ ನಂ.610, ವಿಸ್ತೀರ್ಣ 30 ಎಕರೆ 33 ಗುಂಟೆಗಳು. ಸದರಿ ದಾವಾಸ್ತಿಯ ಗಡಿ ಗುರುತುಗಳು ಈ ಕೆಳಗಿನಂತಿರುತ್ತದೆ.**

| | | |
|---|---|---|
| **ಪೂರ್ವ** | **:** | **ಸರ್ವೆ ನಂ.611 (ವಾದಿಯರ) ಜಮೀನು.** |
| **ಪಶ್ಚಿಮ** | **:** | **ಧಾನಪ್ಪಾ ಜಂಬ್ರೆ ಇವರ ಜಮೀನು.** |
| **ಉತ್ತರ** | **:** | **ದತ್ತಪ್ಪಾ ಸುರ್ವಾಸೆ ಮತ್ತು ಇತರರ ಜಮೀನು.** |
| **ದಕ್ಷಿಣ** | **:** | **ಶರಣಪ್ಪಾ ಪಾಟೀಲ ಇವರ ಜಮೀನು.** |

**(ಸದ್ಯ ಸರ್ವೆ ನಂ.610/1 ಮತ್ತು 610/2 ಎಂದು ಪ್ರತಿವಾದಿಯರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇರುತ್ತವೆ)**

**ಬಿ. ಅಫಜಲಪೂರ ತಾಲೂಕಿನ ಮಾಶಾಳ ಗ್ರಾಮದಲ್ಲಿರುವ ಜಮೀನು ಸರ್ವೆ ನಂ.611, ವಿಸ್ತೀರ್ಣ 23 ಎಕರೆ 03 ಗುಂಟೆಗಳು. ಸದರಿ ದಾವಾಸ್ತಿಯ ಗಡಿ ಗುರುತುಗಳು ಈ ಕೆಳಗಿನಂತಿರುತ್ತದೆ.**

| | | |
|---|---|---|
| **ಪೂರ್ವ** | **ಃ** | **ಕಾಂತು ಮಹಾರಾಜ ಇವರ ಜಮೀನು.** |
| **ಪಶ್ಚಿಮ** | **ಃ** | **ವಾದಿಯರ ಜಮೀನು ಸರ್ವೆ ನಂ.610.** |
| **ಉತ್ತರ** | **ಃ** | **ಮಲ್ಲಿಕಾರ್ಜುನ ದೊಡ್ಡಮನಿ ಇವರ ಜಮೀನು** |
| **ದಕ್ಷಿಣ** | **ಃ** | **ಕಾಂತು ಮಹಾರಾಜ ಇವರ ಜಮೀನು.** |

3. ವಾದಿಯರ ವಾದ ಪತ್ರದ ಸಾರಾಂಶ ಈ ಕೆಳಗಿನಂತಿರುತ್ತದೆಃ

ಮೂಲತಃ ಸದರಿ ವಾದಿಯರ ತಂದೆ ಮೃತ ಮಡಿವಾಳಪ್ಪಾ ದಾವಾಸ್ತಿಗಳಿಗೆ ಮಾಲೀಕರು ಹಾಗೂ ಸ್ವಾಧೀನದಾರರಾಗಿದ್ದು, ದಿನಾಂಕ 15-12-1959 ರ ನೊಂದಾಯಿತ ಕ್ರಯಪತ್ರದ ಮುಖಾಂತರ ಸದರಿ ದಾವಾಸ್ತಿಗಳನ್ನು ಖರೀದಿಸಿದ್ದು, ಸದರಿ ಕ್ರಯಪತ್ರದಡಿ ಇವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿದ್ದು, ಕಂದಾಯ ದಾಖಲೆಗಳಲ್ಲಿ ಇವರ ಹೆಸರು ದಾಖಲಾಗಿದ್ದು, ಖರೀದಿಸಿದ ದಿನದಿಂದ ಮೃತ ಮಡಿವಾಳಪ್ಪನವರು ಮಾಲೀಕರು ಹಾಗೂ ಸ್ವಾಧೀನದಾರರಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದರೆಂದು ಹಾಗೂ 1 ಮತ್ತು 2 ನೇ ವಾದಿಯರು ಸಹಾಯ ಮಾಡುತ್ತಿದ್ದರೆಂದು, ಅಲ್ಲದೆ ವಾದಿಯರ ತಂದೆಯು ದಿನಾಂಕ 18-11-2002 ರಂದು ತೀರಿಕೊಂಡಿದ್ದು, ಅವರ ಮರಣದ ನಂತರ ವಾದಿಯರು ಮಾಲೀಕರು ಹಾಗೂ ಸ್ವಾಧೀನದಾರರಾಗಿ ಈವರೆಗೂ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆಂದು,

ತಮ್ಮ ತಂದೆಯು ಅನಕ್ಷರಸ್ಥರಾಗಿದ್ದರಿಂದ ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ಕಂದಾಯ ಪಾವತಿಸಲು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ವ್ಯವಹರಿಸಲು ತಮ್ಮ ಸಹೋದರ ಚಂದ್ರಶ್ಯಾ ಇವರಿಗೆ ಜವಾಬ್ದಾರಿ ವಹಿಸಿದ್ದರಿಂದ, ಆ ಪ್ರಕಾರವಾಗಿ ಅವರ ಸಹೋದರನಾದ ಚಂದ್ರಶ್ಯಾ ಇವರು ದಾವಾಸ್ತಿಗೆ ಸಂಬಂದಪಟ್ಟಂತೆ ತಹಶೀಲ್ದಾರ ಕಚೇರಿ ಮತ್ತು ಇತರ ಸರ್ಕಾರಿ ಕಚೇರಿಗಳಲ್ಲಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನೆಂದು, ಹೀಗಿರುವಲ್ಲಿ ತಮ್ಮ ತಂದೆಯ ಮರಣದ ನಂತರ 2014 ರಲ್ಲಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದಾಗ, ದಾವಾಸ್ತಿ ಸರ್ವೆ ನಂ.610 ರ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿ ಇದ್ದು, ಕೇವಲ ದಾವಾಸ್ತಿ ಸರ್ವೆ ನಂ.611 ಮಾತ್ರ ತಮ್ಮ ತಂದೆಯ ಹೆಸರಿನಲ್ಲಿ ಇರುವುದು ಕಂಡುಬಂದಿರುತ್ತದೆಂದು, ಆ ಪ್ರಕಾರವಾಗಿ ಸರ್ವೆ ನಂ.611 ನ್ನು ಮಾತ್ರ ತಮ್ಮ ಹೆಸರಿಗೆ ವರ್ಗಾಯಿಸಿದ್ದು, ಸರ್ವೆ ನಂ.610 ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇರುತ್ತದೆಂದು, ಈ ಬಗ್ಗೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ಪ್ರತಿವಾದಿಯರ ತಂದೆಯಾದ ಚಂದ್ರಶ್ಯಾ ಇವರು 1976 ರಲ್ಲಿಯೇ ತಮ್ಮ ಮತ್ತು ತಮ್ಮ ತಂದೆಯ ತಿಳಿವಳಿಕೆಗೆ ಇಲ್ಲದಂತೆ ಕಾನೂನು ಬಾಹೀರವಾಗಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆಂದು ತಿಳಿದು ಬಂದಿದ್ದು, ಆ ಕೂಡಲೇ 1 ಮತ್ತು 2 ನೇ ಪ್ರತಿವಾದಿಯರಲ್ಲಿ 2014 ರ ನವೆಂಬರ್ ತಿಂಗಳಿನಲ್ಲಿ ಭೇಟಿಯಾಗಿ ತಮ್ಮ ತಂದೆಯ ಹೆಸರನ್ನು ತೆಗೆದುಹಾಕಿ ಸರ್ವೆ ನಂ.610 ನ್ನು ತಮ್ಮ ಹೆಸರಿಗೆ ವರ್ಗಾಯಿಸುವಂತೆ ಕೋರಿಕೊಂಡಾಗ ಮೊದಲು ಒಪ್ಪಿಕೊಂಡಿದ್ದರೂ ಸಹ ನಂತರ ನಿರಾಕರಿಸಿರುತ್ತಾರೆಂದು, ಅಲ್ಲದೆ

ದಾವಾಸ್ತಿಯಲ್ಲಿನ ತಮ್ಮ ಹಕ್ಕನ್ನು ನಿರಾಕರಿಸಿರುತ್ತಾರೆಂದು ಮತ್ತು ತಮ್ಮ ಹೆಸರಿನಲ್ಲಿ ಖಾತೆ ಇರುವುದನ್ನು ದುರುಪಯೋಗಪಡಿಸಿಕೊಂಡು ಮಾರಾಟ ಮಾಡಲು ಸಹ ಪ್ರಯತ್ನಿಸಿರುತ್ತಾರೆಂದು, ಅಲ್ಲದೆ 2016 ರ ನವೆಂಬರ ತಿಂಗಳಿನಲ್ಲಿ ದಾವಾಸ್ತಿಯಲ್ಲಿನ ಸಾಗುವಳಿಗೆ ಅಡ್ಡಿ ಪಡಿಸಲು ಪ್ರಯತ್ನಿಸಿರುತ್ತಾರೆಂದು, ಅಲ್ಲದೆ ಇತ್ತೀಚೆಗೆ ಪ್ರತಿವಾದಿಯರು ತಮ್ಮಲ್ಲಿ ಪಾಲು ಮಾಡಿಕೊಂಡು ಸರ್ವೆ ನಂ.610/1 ಮತ್ತು 610/2 ರಂತೆ ಹಂಚಿಕೆ ಮಾಡಿಕೊಂಡಿರುತ್ತಾರೆಂದು, ಆದರೆ ಸದರಿ ದಾವಾಸ್ತಿಯಲ್ಲಿ ಪ್ರತಿವಾದಿಯರಿಗೆ ಯಾವುದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲವೆಂದು, ಕಾನೂನು ಬಾಹೀರವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿರುವುದರಿಂದ ದಾವಾಸ್ತಿಯಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲವೆಂದು, ಆದ್ದರಿಂದ ದಾವಾಸ್ತಿಗಳಿಗೆ ಮಾಲೀಕತ್ವದ ಹಕ್ಕನ್ನು ಘೋಷಿಸುವಂತೆ ಮತ್ತು ತಮ್ಮ ಸ್ವಾಧೀನಾನುಭವಕ್ಕೆ ತೊಂದರೆ ಪಡಿಸದಂತೆ ಪ್ರತಿವಾದಿಯರನ್ನು ನಿರ್ಬಂಧಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

4. ದಾವಾ ಸಮನ್ಸ ಜಾರಿಯಾದ ನಂತರ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ದಾವಾಂಶಗಳನ್ನು ಸಂಪೂರ್ಣವಾಗಿ ಅಲ್ಲಗಳೆದು, ದಾವಾಸ್ತಿ ಸರ್ವೆ ನಂ.610 ನ್ನು ವಾದಿಯರ ತಂದೆ ಮಡಿವಾಳಪ್ಪ ಹಾಗೂ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರು ಒಟ್ಟಾಗಿ ಖರೀದಿಸಿದ್ದು, ಆದರೆ ಕ್ರಯಪತ್ರವನ್ನು ಮಡಿವಾಳಪ್ಪನ ಹೆಸರಿನಲ್ಲಿ ನೆಪ ಮಾತ್ರಕ್ಕೆ ದಾಖಲಿಸಲಾಗಿತ್ತೆಂದು, ಅಲ್ಲದೆ 1971 ರಲ್ಲಿ ಕುಟುಂಬದ

ಪಾಲಿನಲ್ಲಿ ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ತಂದೆ ಮಡಿವಾಳಪ್ಪನ ಹಿಸ್ಸೆಗೆ ಮತ್ತು ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33 ಗುಂಟೆಗಳು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹಿಸ್ಸೆಗೆ ಬಂದಿರುತ್ತದೆಂದು, ಆ ಪ್ರಕಾರವಾಗಿ ಮಡಿವಾಳಪ್ಪ ಮತ್ತು ಚಂದ್ರಶ್ಯಾ ಇವರ ಹೆಸರಿನಲ್ಲಿ 1971 ರಲ್ಲಿಯೇ ಖಾತೆ ವರ್ಗಾವಣೆಯಾಗಿದ್ದು, ಅಂದಿನಿಂದಲೂ ಸಹಾ ತಮ್ಮ ತಮ್ಮ ಹಿಸ್ಸೆಯ ಆಸ್ತಿಗಳ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದೇವೆಂದು ಹಾಗೂ ಕಾಲಕಾಲಕ್ಕೆ ಕಂದಾಯ ಪಾವತಿಸುತ್ತಿದ್ದೇವೆಂದು, ಅಲ್ಲದೆ ಪಾಲಾದ ದಿನದಿಂದ ಈವರೆಗೂ ವಾದಿಯರ ತಂದೆಯು ತಮ್ಮ ಮರಣದವರೆಗೂ ಸಹ ಆ ರೀತಿ ವರ್ಗಾವಣೆಯಾಗಿರುವುದನ್ನು ಪ್ರಶ್ನಿಸಿರುವುದಿಲ್ಲವೆಂದು ಹಾಗೂ ತಕರಾರು ಮಾಡಿರುವುದಿಲ್ಲವೆಂದು, ಅಲ್ಲದೆ ಸದರಿ ಖಾತೆ ವರ್ಗಾವಣೆಯನ್ನು ವಾದಿಯರ ತಂದೆಯ ಜೀವಿತ ಕಾಲದಲ್ಲಾಗಲಿ ಅಥವಾ ಮರಣದ ನಂತರವಾಗಲಿ ವಾದಿಯರಾಗಲಿ ಈವರೆಗೂ ಯಾವುದೇ ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನಿಸದೇ ಇರುವುದರಿಂದ, ಈ ನ್ಯಾಯಾಲಯವು ವಿಚಾರಣಾ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು, ಅಲ್ಲದೆ ಕಾಲಪರಿಮಿತ ಕಾಯ್ದೆಯಡಿ ಊರ್ಜಿತವಾಗಿರುವುದಿಲ್ಲವೆಂದು, ಅಲ್ಲದೆ 1971 ರಿಂದಲೂ ಸಹ ವಾದಿಯರ ತಿಳುವಳಿಕೆಗೆ ಇರುವಂತೆ ಅವರ ಯಾವುದೇ ಅಡಚಣೆ ಇಲ್ಲದೆ ಈವರೆಗೂ ಸಹ ಪ್ರತಿವಾದಿಯರು ಸ್ವಾಧೀನವನ್ನು ಹೊಂದಿದ್ದು, ಪ್ರತಿಕೂಲ ಸ್ವಾಧೀನದಡಿ ಹಕ್ಕನ್ನು ಹೊಂದಿರುತ್ತೇವೆಂದು, ಅಲ್ಲದೆ 5 ರಿಂದ 7 ನೇ ವಾದಿಯರು ಉಳಿದ ವಾದಿಯರೊಂದಿಗೆ ತಕರಾರು

ಮಾಡಿಕೊಂಡಿದ್ದರಿಂದ ಸದರಿ ವಾದಿಯರು ಈ ಸುಳ್ಳು ದಾವೆಯನ್ನು ಸಲ್ಲಿಸಿ, ದಾವಾಸ್ತಿಯನ್ನು ಕಬಳಿಸಲು ಪ್ರಯತ್ನಿಸಿರುತ್ತಾರೆಂದು, ಅಲ್ಲದೆ ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲವೆಂದು, ತಿಳಿಸಿದ ವ್ಯಾಜ್ಯ ಕಾರಣವು ಶುದ್ದ ಸುಳ್ಳಿನಿಂದ ಕೂಡಿರುತ್ತದೆಂದು, ಆದ್ದರಿಂದ ಸದರಿ ದಾವೆಯನ್ನು ಖರ್ಚಿನೊಂದಿಗೆ ಹಾಗೂ ನಷ್ಟ ಪರಿಹಾರದೊಂದಿಗೆ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5. ಉಭಯ ಪಕ್ಷಗಾರರ ದಾವಾಂಶಗಳ ಮೇರೆಗೆ ಈ ನ್ಯಾಯಾಲಯವು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತದೆ.

1. ಸದರಿ ದಾವಾಸ್ತಿಗಳು ತಮ್ಮ ಸಂಪೂರ್ಣ ಮಾಲೀಕತ್ವಕ್ಕೆ ಮತ್ತು ಸ್ವಾಧೀನಕ್ಕೊಳಪಟ್ಟ ಆಸ್ತಿಗಳಾಗಿರುತ್ತದೆಂಬುದನ್ನು ವಾದಿಯರು ರುಜುವಾತು ಪಡಿಸುವರೇ?

2. ದಾವಾಸ್ತಿ ಸರ್ವೆ ನಂ.610 ನ್ನು ವಾದಿಯರ ತಂದೆ ಹಾಗೂ ತಮ್ಮ ತಂದೆ ಜಂಟಿಯಾಗಿ ಖರೀದಿಸಿದ್ದರೂ ಸಹ ವಾದಿಯರ ತಂದೆಯ ಹೆಸರಿನಲ್ಲಿ ಕ್ರಯಪತ್ರವನ್ನು ನೊಂದಣಿ ಪಡಿಸಲಾಗಿರುತ್ತದೆಂಬುವುದನ್ನು ಪ್ರತಿವಾದಿಯರು ರುಜುವಾತು ಪಡಿಸುವರೇ?

3. 1971 ರಲ್ಲಿ ಆದ ಕುಟುಂಬದಲ್ಲಿ ಆದ ಪಾಲಿನ ಪ್ರಕಾರ ದಾವಾಸ್ತಿಯ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ತಂದೆ ಮಡಿವಾಳಪ್ಪನ ಹಿಸ್ಸೆಗೆ ಮತ್ತು ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33 ಗುಂಟೆಗಳು ಪ್ರತಿವಾದಿಯರ ತಂದೆಯ ಹಿಸ್ಸೆಗೆ ಬಂದಿರುತ್ತದೆಂಬುವುದನ್ನು 1 ಮತ್ತು 2 ನೇ ಪ್ರತಿವಾದಿಯರು ರುಜುವಾತು ಪಡಿಸುವರೇ?

4. ವಾದಿಯರ ದಾವೆಯು ಕಾಲಪರಿಮಿತ ಕಾಯ್ದೆಯಡಿ ಊರ್ಜಿತವಾಗಿರುವುದಿಲ್ಲವೆಂದು 1 ಮತ್ತು 2 ನೇ ಪ್ರತಿವಾದಿಯು ರುಜುವಾತು ಪಡಿಸುವರೇ?

5. ದಾವಾಸ್ತಿ ಸರ್ವೆ ನಂ610 ಕ್ಕೆ ತಮ್ಮ ತಂದೆಯು ಮಾಲೀಕರು ಹಾಗೂ ಸ್ವಾಧೀನದಾರರಾಗಿದ್ದು, ಅವರ ಮರಣದ ನಂತರ ತಾವು ಮಾಲೀಕರು ಹಾಗೂ ಸ್ವಾಧೀನದಾರರಾಗಿರುತ್ತೆವೆಂಬುವುದನ್ನು1 ಮತ್ತು 2 ನೇ ಪ್ರತಿವಾದಿಯರು ರುಜುವಾತು ಪಡಿಸುವರೇ?

6. ದಾವೆಯಲ್ಲಿ ಕೋರಿರುವಂತೆ ದಾವಾಸ್ತಿಗೆ ಮಾಲೀಕತ್ವದ ಹಕ್ಕು ಘೋಷಣಾ ಪರಿಹಾರ ಪಡೆಯಲು ವಾದಿಯರು ಅರ್ಹರೇ?

7. ದಾವೆಯಲ್ಲಿ ಕೋರಿದಂತೆ ಪ್ರತಿವಾದಿಗಳ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಪಡೆಯಲು ವಾದಿಯರು ಅರ್ಹರೇ?

8. ಆದೇಶ ವ ಡಿಕ್ರಿ ಏನು?

6. ದಾವಾಂಶಗಳನ್ನು ರುಜುವಾತು ಪಡಿಸಲು 1 ನೇ ವಾದಿಯು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ನುಡಿದು, ತನ್ನ ಸಾಕ್ಷ್ಯ ಸಮರ್ಥನೆಗಾಗಿ ನಿ.ಪಿ.1 ರಿಂದ 82 ದಾಖಲೆಗಳನ್ನು ಗುರುತಿಸಿರುತ್ತಾರೆ. ಅಲ್ಲದೆ ಪಿ.ಡಬ್ಲೂ-2 ಮತ್ತು 3 ರವರ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಲಿಖಿತ ಹೇಳಿಕೆಯ ಅಂಶಗಳನ್ನು ರುಜುವಾತು ಪಡಿಸಲು 1 ನೇ ಪ್ರತಿವಾದಿಯು ಡಿ.ಡಬ್ಲೂ-1 ಎಂದು ಸಾಕ್ಷ್ಯ ನುಡಿದು, ನಿ.ಡಿ.1 ರಿಂದ 15 ದಾಖಲೆಗಳನ್ನು ಗುರುತಿಸಿರುತ್ತಾರೆ.

7. ವಾದಿಯರ ಪರವಾಗಿ ಶ್ರೀ ಎಸ್.ಕೆ.ಪಿ ವಕೀಲರು ವಾದ ಮಂಡಿಸಿರುತ್ತಾರೆ. ಪ್ರತಿವಾದಿಯರ ಪರವಾಗಿ ಶ್ರೀ ಡಿ.ಡಿ.ಡಿ ವಕೀಲರು ವಾದ ಮಂಡಿಸಿರುತ್ತಾರೆ.

8. ಪಿ.ಡಬ್ಲೂ-1 ರಿಂದ 3 ರವರ ಮತ್ತು ಡಿ.ಡಬ್ಲೂ-1 ರವರ ಮೌಖಿಕ ಸಾಕ್ಷ್ಯವನ್ನು ಹಾಗೂ ನಿ.ಪಿ.1 ರಿಂದ 82 ಮತ್ತು ನಿ.ಡಿ.1 ರಿಂದ 15 ರ ದಾಖಲೆಗಳನ್ನು ಹಾಗೂ ದಾವಾಂಶಗಳನ್ನು ಪರಿಶೀಲಿಸಿ, ಉಭಯ ವಕೀಲರ ವಾದ ವಿವಾದವನ್ನು ಆಲಿಸಿ, ಮೇಲ್ಕಂಡ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

| | | |
|---|---|---|
| 1 ನೇ ವಿವಾದಾಂಶ | ಃ | ಸಕಾರಾತ್ಮಕವಾಗಿ. |
| 2 ನೇ ವಿವಾದಾಂಶ | ಃ | ನಕಾರಾತ್ಮಕವಾಗಿ. |
| 3 ನೇ ವಿವಾದಾಂಶ | ಃ | ನಕಾರಾತ್ಮಕವಾಗಿ. |
| 4 ನೇ ವಿವಾದಾಂಶ | ಃ | ನಕಾರಾತ್ಮಕವಾಗಿ. |
| 5 ನೇ ವಿವಾದಾಂಶ | ಃ | ನಕಾರಾತ್ಮಕವಾಗಿ. |
| 6 ನೇ ವಿವಾದಾಂಶ | ಃ | ಸಕಾರಾತ್ಮಕವಾಗಿ. |
| 7 ನೇ ವಿವಾದಾಂಶ | ಃ | ಸಕಾರಾತ್ಮಕವಾಗಿ. |
| 8 ನೇ ವಿವಾದಾಂಶ | ಃ | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## ಕಾ ರ ಣ ಗ ಳು

9. **1 ರಿಂದ 3 ಮತ್ತು 5 ನೇ ವಿವಾದಾಂಶಃ** ಸದರಿ ವಿವಾದಾಂಶಗಳು ಒಂದಕ್ಕೊಂದು ಸಂಬಂದಪಡುವುದರಿಂದ ದಾವಾಂಶಗಳ ಹಾಗೂ ಸಾಕ್ಷ್ಯದ ಪುನರಾವರ್ತನೆಯನ್ನು ತಡೆಯುವ ಉದ್ದೇಶದಿಂದ ಜಂಟಿಯಾಗಿ ಉತ್ತರಿಸಲಾಗಿದೆ.

10. ದಾವಾಂಶಗಳನ್ನು ರುಜುವಾತು ಪಡಿಸಲು 1 ನೇ ವಾದಿಯು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ನುಡಿದು, ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾಂಶಗಳನ್ನು ಪುನರುಚ್ಚರಿಸಿರುತ್ತಾರೆ. ಸದರಿ ವಾದಿಯರು ತಮ್ಮ ದಾವಾಂಶಗಳಲ್ಲಿ ಹಾಗೂ ಪಿ.ಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ ದಾವಾಸ್ತಿಗಳನ್ನು ತಮ್ಮ ತಂದೆ ಮೃತ ಮಡಿವಾಳಪ್ಪನವರು ದಿನಾಂಕ 15-12-1959 ರ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆಂದು,

ಖರೀದಿಸಿದ ದಿನದಿಂದ ದಾವಾಸ್ತಿಗಳಿಗೆ ಸಂಪೂರ್ಣ ಮಾಲೀಕರು ಹಾಗೂ ಸ್ವಾಧೀನದಾರರಾಗಿದ್ದು, ಹಾಗೂ ಸದರಿ ಕ್ರಯಪತ್ರದಂತೆ ತಮ್ಮ ತಂದೆಯ ಹೆಸರಿಗೆ ಖಾತೆ ವರ್ಗಾವಣೆಯಾಗಿದ್ದು, ಕಂದಾಯ ದಾಖಲೆಗಳಲ್ಲಿಯೂ ಸಹ ತಮ್ಮ ತಂದೆಯ ಹೆಸರು ದಾಖಲಾಗಿರುತ್ತದೆಯೆಂದು, ಅಲ್ಲದೆ ತಮ್ಮ ತಂದೆಯವರು ಸ್ವತಃ ದಾವಾಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದರೆಂದು ಹಾಗೂ 1 ಮತ್ತು 2 ನೇ ವಾದಿಯರು ಸಹಾಯ ಮಾಡುತ್ತಿದ್ದರೆಂದು, ಅಲ್ಲದೆ ತಮ್ಮ ತಂದೆಯವರು ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ಸರ್ಕಾರಕ್ಕೆ ಕಾಲಕಾಲಕ್ಕೆ ಕಂದಾಯ ಪಾವತಿಸುತ್ತಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ.

11. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾಸ್ತಿಗಳನ್ನು ವಾದಿಯರ ತಂದೆ ಮಡಿವಾಳಪ್ಪ ಮತ್ತು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರು ಜಂಟಿಯಾಗಿ ಖರೀದಿಸಿದ್ದು, ಆದರೆ ಮಡಿವಾಳಪ್ಪನ ಹೆಸರಿನಲ್ಲಿ ಕ್ರಯಪತ್ರವಾಗಿದೆಯೆಂದು, 1971 ರಲ್ಲಿ ಆದ ಪಾಲಿನಲ್ಲಿ ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33 ಗುಂಟೆಗಳು ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರ ಹಿಸ್ಸೆಗೆ ಮತ್ತು ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ತಂದೆ ಮಡಿವಾಳಪ್ಪನ ಹಿಸ್ಸೆಗೆ ಬಂದಿದ್ದು, ಆ ಪ್ರಕಾರವಾಗಿ ಖಾತೆ ವರ್ಗಾವಣೆಯಾಗಿದ್ದು, ಅದರಂತೆ ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳ ಸ್ವಾಧೀನವನ್ನು ಅನುಭವಿಸಿಕೊಂಡು ಬರುತ್ತಿದ್ದೆವೆಂದು, ಅವರ ಮರಣದ ನಂತರ ತಮ್ಮ ತಂದೆಯ ಹಿಸ್ಸೆಗೆ ಬಂದ ಸರ್ವೆ ನಂ.610 ಕ್ಕೆ ಮಾಲೀಕರು

ಹಾಗೂ ಸ್ವಾಧೀನದಾರರಾಗಿದ್ದು, ಅಲ್ಲದೆ ಅಂದಿನಿಂದಲೂ ತಹ ತಾವು ಮಾಲೀಕರು ಹಾಗೂ ಸ್ವಾಧೀನದಾರರಾಗಿರುತ್ತೆವೆಂದು ಪ್ರತಿಸಾಧನೆ ಮಾಡಿರುತ್ತಾರೆ.

12. ಇದಕ್ಕೆ ಪೂರಕವಾಗಿ 1 ನೇ ಪ್ರತಿವಾದಿಯು ಡಿ.ಡಬ್ಲೂ-1 ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಉಭಯ ಪಕ್ಷಗಾರರ ಸಾಕ್ಷವನ್ನು ಪರಿಶೀಲಿಸಿದಾಗ, ಸದರಿ ದಾವಾಸ್ತಿಗಳನ್ನು ಖರೀದಿಸಲಾಗಿರುತ್ತದೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಆದರೆ ವಾದಿಯರ ಪ್ರಕಾರ ಅವರ ತಂದೆ ಮೃತ ಮಡಿವಾಳಪ್ಪನು ದಾವಾಸ್ತಿಗಳನ್ನು ಖರೀದಿಸಿರುತ್ತಾರೆಂದು ಪ್ರತಿಸಾಧನೆ ಮಾಡಿರುತ್ತಾರೆ. ಆದರೆ ಪ್ರತಿವಾದಿಯರು ತಮ್ಮ ತಂದೆ ಚಂದ್ರಶ್ಯಾ ಹಾಗೂ ವಾದಿಯರ ತಂದೆ ಮಡಿವಾಳಪ್ಪ ಜಂಟಿಯಾಗಿ ಸದರಿ ಆಸ್ತಿಗಳನ್ನು ಖರೀದಿಸಿದ್ದು, ಆದರೆ ಮಡಿವಾಳಪ್ಪನ ಹೆಸರಿನಲ್ಲಿ ನೇಪಮಾತ್ರಕ್ಕೆ ಕ್ರಯಪತ್ರವಾಗಿದೆಯೆಂದು ಪ್ರತಿಸಾಧನೆ ಮಾಡಿರುತ್ತಾರೆ.

13. ಸದರಿ ದಾವಾಸ್ತಿಗಳನ್ನು ತಮ್ಮ ತಂದೆ ಮೃತ ಮಡಿವಾಳಪ್ಪನವರು ದಿನಾಂಕ 15-12-1959 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆನ್ನುವ ಬಗ್ಗೆ ಪಿ.ಡಬ್ಲೂ-1 ರವರು ನಿ.ಪಿ.80 ರ ಕ್ರಯಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ನಿ.ಪಿ.80 ರ ಕ್ರಯಪತ್ರವು ಮೂಲ ಕ್ರಯಪತ್ರದ ನಕಲು ಪ್ರತಿಯಾಗಿದ್ದು, ಉರ್ದು ಭಾಷೆಯಲ್ಲಿ ಇರುತ್ತದೆ. ಅದರ ಇಂಗ್ಲೀಷ ಅನುವಾದವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.80 (ಎ) ಎಂದು ಗುರುತಿಸಲಾಗಿರುತ್ತದೆ. ಅದರಿ ಅನುವಾದವನ್ನು ಪರಿಶೀಲಿಸಿದಾಗ, ಮಲ್ಲಿಕಾರ್ಜುನ

ತಂದೆ ಜೀವನರಾವಸಾಬ ಪಾಟೀಲ, 18 ವರ್ಷಗಳು ಇವರು ಅಪ್ರಾಪ್ತ ವಯಸ್ಕರಾಗಿದ್ದರಿಂದ ಅವರ ಸಂರಕ್ಷಕಳು ಹಾಗೂ ತಾಯಿಯಾದ ಶ್ರೀಮತಿ ನೀಲಮ್ಮಾ ಗಂಡ ಜೀವನರಾವ ಪಾಟೀಲ ಇವರ ಮುಖ್ತಾರನಾಮಾಧಿಕಾರಿಯಾದ ಸಿದ್ರಾಮಪ್ಪಾ ತಂದೆ ರೇವಣಸಿದ್ದಪ್ಪಾ ಸಿದ್ದಪ್ಪಾ ಪಾಟೀಲ ಇವರು ವಾದಿಯರ ತಂದೆ ಮಡಿವಾಳಪ್ಪನ ತಂದೆ ರೇವಣಸಿದ್ದಪ್ಪಾ ಇವರಿಗೆ ದಾವಾಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಅಲ್ಲದೆ ಸದರಿ ದಾವಾಸ್ತಿಗಳನ್ನು ವಾದಿಯರ ತಂದೆ ಮಡಿವಾಳಪ್ಪ ಖರೀದಿಸುವ ಪೂರ್ವದಲ್ಲಿ ಮೂಲತಃ ಮಲ್ಲಿಕಾರ್ಜುನ ತಂದೆ ಜೀವನರಾವ ಸಾಬ ಪಾಟೀಲ ಇವರ ಹೆಸರಿನಲ್ಲಿ ದಾವಾಸ್ತಿಗಳ ಖಾತೆ ಇತ್ತೆಂಬ ಬಗ್ಗೆ ವಾದಿಯರು 1954-55 ರ ನಿ.ಪಿ.1 ರ ಖಾಸರಾ ಪಹಣಿ ಪತ್ರಿಕೆಯನ್ನು ಹಾಗೂ 1955-56 ರಿಂದ 1957-58 ರ ನಿ.ಪಿ.2 ರ ಪಹಣಿ ಪತ್ರಿಕೆಯನ್ನು ಮತ್ತು 1958-59 ರಿಂದ 1960-61 ರ ನಿ.ಪಿ.3 ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ನಿ.ಪಿ.1 ರಿಂದ 3 ರ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ, ಸದರಿ ನಿ.ಪಿ.80 ರ ಕ್ರಯಪತ್ರದಡಿ ದಾವಾಸ್ತಿ ಸರ್ವೆ ನಂ.610/1 ರ ವಿಸ್ತೀರ್ಣ 30 ಎಕರೆ 24 ಗುಂಟೆಗಳನ್ನು ಮಾರಾಟ ಮಾಡುವ ಪೂರ್ವದಲ್ಲಿ ಮಲ್ಲಿಕಾರ್ಜುನ ತಂದೆ ಜೀವನರಾವ ಸಾಬ ಪಾಟೀಲ ಇವರು ಮಾಲೀಕರು ಹಾಗೂ ಸ್ವಾಧೀನದಾರರಾಗಿದ್ದರೆಂಬುದು ಕಂಡುಬರುತ್ತದೆ.

14. ನಿ.ಪಿ.80 ರ ಕ್ರಯಪತ್ರದ ಮೂಲಕ ವಾದಿಯರ ತಂದೆ ಮಡಿವಾಳಪ್ಪ ಇವರು ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 24 ಗುಂಟೆಗಳನ್ನು ಮತ್ತು ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳನ್ನು ಖರೀದಿಸಿದ್ದು, ಆ ಪ್ರಕಾರವಾಗಿ ವಾದಿಯರ ತಂದೆ ಮಡಿವಾಳಪ್ಪ ತಂದೆ ರೇವಣಸಿದ್ದಪ್ಪ ಧನಶೆಟ್ಟಿ ಇವರ ಹೆಸರಿನಲ್ಲಿ ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 34 ಎಕರೆ 24 ಗುಂಟೆಗಳು ನಿ.ಪಿ.6 ಮತ್ತು ನಿ.ಪಿ.7/ನಿ.ಪಿ.32 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ 1963-64 ರಿಂದ 1972-73 ರವರೆಗೂ ಖಾತೆ ಇರುತ್ತದೆಂದು, ಅದೇ ರೀತಿ 1961-62 ರಿಂದ 1962-63 ರ ನಿ.ಪಿ.4 ಮತ್ತು 5 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ತಂದೆ ಮಡಿವಾಳಪ್ಪ ತಂದೆ ರೇವಣಸಿದ್ದಪ್ಪ ಧನಶೆಟ್ಟಿ ಇವರ ಹೆಸರಿನಲ್ಲಿ ಖಾತೆ ಇರುತ್ತದೆಂಬುದು ಕಂಡುಬರುತ್ತದೆ.

15. ಸದರಿ ದಾವಾಸ್ತಿಗಳನ್ನು ತಮ್ಮ ತಂದೆ ಚಂದ್ರಶ್ಯಾ ಮತ್ತು ವಾದಿಯರ ತಂದೆ ಮಡಿವಾಳಪ್ಪ ಇವರು ಜಂಟಿಯಾಗಿ ಖರೀದಿಸಿದ್ದು, ಆದರೆ ವಾದಿಯರ ತಂದೆ ಮಡಿವಾಳಪ್ಪನವರ ಹೆಸರಿನಲ್ಲಿ ನೆಪ ಮಾತ್ರಕ್ಕೆ ಕ್ರಯಪತ್ರವಾಗಿರುತ್ತದೆಂದು ಪ್ರತಿವಾದಿಯರು ತಿಳಿಸಿದ್ದರೂ ಸಹ, ಆದರೆ ಡಿ.ಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯಕ್ಕೆ ಸಮರ್ಥನೆಗಾಗಿ ಸದರಿ ದಾವಾಸ್ತಿಗಳನ್ನು ತಮ್ಮ ತಂದೆ ಚಂದ್ರಶ್ಯಾ ಮತ್ತು ವಾದಿಯರ ತಂದೆ ಮಡಿವಾಳಪ್ಪನವರು ಜಂಟಿಯಾಗಿ ಖರೀದಿಸಿದ್ದರೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಅಲ್ಲದೆ ವಾದಿಯರು ಹಾಜರುಪಡಿಸಿದ ನಿ.ಪಿ.80 ಮತ್ತು 80 (ಎ) ರ ಕ್ರಯಪತ್ರಗಳಲ್ಲಿ ಸದರಿ ದಾವಾಸ್ತಿಗಳನ್ನು ವಾದಿಯರ ತಂದೆ ಮೃತ ಮಡಿವಾಳಪ್ಪ ಮತ್ತು ಪ್ರತಿವಾದಿಯರ ತಂದೆ ಚಂದ್ರಶ್ಯಾ ಜಂಟಿಯಾಗಿ ಖರೀದಿಸಿರುತ್ತಾರೆಂದು ತಿಳಿಸಿರುವುದಿಲ್ಲ. ಅಲ್ಲದೆ ಕುಟುಂಬದ ಪರವಾಗಿ ವಾದಿಯರ ತಂದೆ ಮಡಿವಾಳಪ್ಪನ ಹೆಸರಿನಲ್ಲಿ ಕ್ರಯಪತ್ರವಾಗಿದ್ದು ಅವರ ಸ್ವಾಧೀನಕ್ಕೆ ನೀಡಲಾಗಿರುತ್ತದೆಂದು ಸಹ ತಿಳಿಸಿರುವುದಿಲ್ಲ.

16. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿಗಳನ್ನು ವಾದಿಯರ ತಂದೆ ಮೃತ ಮಡಿವಾಳಪ್ಪನವರು ವೈಯುಕ್ತಿಕವಾಗಿ ಖರೀದಿಸಿರುತ್ತಾರೆಂಬುದು ಕಂಡುಬರುತ್ತದೆ. ಅಲ್ಲದೆ ಸದರಿ ಕ್ರಯದ ಹಣವನ್ನು ವಾದಿಯರ ತಂದೆ ಮಡಿವಾಳಪ್ಪ ಮಾತ್ರ ನೀಡಿರುತ್ತಾರೆಂದು ಹಾಗೂ ಸದರಿ ಕ್ರಯಪತ್ರದಡಿ ದಾವಾಸ್ತಿಗಳ ಸ್ವಾಧೀನವನ್ನು ವಾದಿಯರ ತಂದೆಗೆ ಮಾತ್ರ ನೀಡಲಾಗಿರುತ್ತದೆಂಬುದು ಕಂಡುಬರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿಗಳನ್ನು ವಾದಿಯರ ತಂದೆ ಮೃತ ಮಡಿವಾಳಪ್ಪನವರು ನಿ.ಪಿ.80 ರ ನೊಂದಾಯಿತ ಕ್ರಯಪತ್ರದಡಿ ವೈಯುಕ್ತಿಕವಾಗಿ ಖರೀದಿಸಿರುತ್ತಾರೆಂದು ಕಂಡುಬರುತ್ತದೆಯೇ ವಿನಃ, ಡಿ.ಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ ಹಾಗೂ ಲಿಖಿತ ಹೇಳಿಕೆಯಲ್ಲಿ ತಿಳಿಸಿದಂತೆ ತಮ್ಮ ತಂದೆ ಚಂದ್ರಶ್ಯಾ ಮತ್ತು ವಾದಿಯರ ತಂದೆ ಮಡಿವಾಳಪ್ಪ ಜಂಟಿಯಾಗಿ ಖರೀದಿಸಿದ್ದು, ನೆಪಮಾತ್ರಕ್ಕೆ ವಾದಿಯರ ತಂದೆ ಮಡಿವಾಳಪ್ಪನವರ ಹೆಸರಿನಲ್ಲಿ ಕ್ರಯಪತ್ರವಾಗಿರುತ್ತದೆಂಬುದನ್ನು ಅಂಗೀಕರಿಸಲು ಸಾಧ್ಯವಿರುವುದಿಲ್ಲ.

17. ಅಲ್ಲದೆ ಹಾಗೊಂದು ವೇಳೆ ದಾವಾಸ್ತಿಗಳನ್ನು ಪ್ರತಿವಾದಿಯರ ತಂದೆ ಚಂದ್ರಶ್ಯಾ ಮತ್ತು ವಾದಿಯರ ತಂದೆ ಮೃತ ಮಡಿವಾಳಪ್ಪನವರು ಜಂಟಿಯಾಗಿ ಖರೀದಿಸಿದಲ್ಲಿ, ಖರೀದಿಸಿದ ನಂತರ ಉಭಯ ಪಕ್ಷಗಾರರ ತಂದೆಯವರ ಹೆಸರಿನಲ್ಲಿ ಖಾತೆ ಆಗಬೇಕಾಗಿತ್ತು, ಆ ಪ್ರಕಾರವಾಗಿ ಖಾತೆ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಅದರಂತೆ ಪ್ರತಿವಾದಿಯರ ತಂದೆಯವರು ತನ್ನ ಹೆಸರಿನಲ್ಲಿ ಸಹ ಖಾತೆ ಮಾಡಿಕೊಳ್ಳಬಹುದಾಗಿತ್ತು. ಆದರೆ ವಾದಿಯರ ತಂದೆ ಮಡಿವಾಳಪ್ಪನವರ ಹೆಸರು ಮಾತ್ರ ಎರಡು ದಾವಾಸ್ತಿಗಳಿಗೆ ಖಾತೆ ಬದಲಾವಣೆಯಾಗಿರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿಯನ್ನು ವಾದಿಯರ ತಂದೆ ಮೃತ ಮಡಿವಾಳಪ್ಪ ಖರೀದಿಸಿದ್ದು, ಅವರ ಮಾಲೀಕತ್ವ ಹಾಗೂ ಸ್ವಾಧೀನಕೊಳಪಟ್ಟ ಆಸ್ತಿಯಾಗಿದೆಯೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ.

18. ಸದರಿ ವಾದಿಯರು ತಮ್ಮ ದಾವಾಂಶಗಳಲ್ಲಿ ಹಾಗೂ ಪಿ.ಡಬ್ಲೂ-1 ರವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ತಂದೆಯವರು ದಿನಾಂಕ 18-11-2002 ರಂದು ತೀರಿಕೊಂಡಿದ್ದು, 2014 ರಲ್ಲಿ ತಮ್ಮ ಹೆಸರಿಗೆ ಖಾತೆ ಮಾಡಿಕೊಳ್ಳಲು ಸಂಬಂದಪಟ್ಟ ಕಂದಾಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದಾಗ, ಸರ್ವೆ ನಂ.610 ರ ಖಾತೆಯು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರಿನಲ್ಲಿ ಇದ್ದುದರಿಂದ ಕೇವಲ ಸರ್ವೆ ನಂ.611 ರ ಖಾತೆಯನ್ನು ಮಾತ್ರ ತಮ್ಮ ಹೆಸರಿಗೆ ಮಾಡಿರುತ್ತಾರೆಂದು, ಈ ಬಗ್ಗೆ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಪರಿಶೀಲಿಸಿದಾಗ,

ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರು ತಮಗೆ ಮತ್ತು ತಮ್ಮ ತಂದೆಗೆ ತಿಳಿಸದೇ ಹಾಗೂ ತಿಳುವಳಿಕೆಗೆ ಇಲ್ಲದಂತೆ ಕಾನೂನು ಬಾಹೀರವಾಗಿ 1971 ರಲ್ಲಿ ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆಂಬ ವಿಚಾರ ತಿಳಿದು ಬಂದಿರುತ್ತದೆಂದು, ಅಲ್ಲದೆ ತಮ್ಮ ತಂದೆಯು ಅನಕ್ಷರಸ್ಥರಾಗಿದ್ದರಿಂದ ಯಾವುದೇ ಸರ್ಕಾರಿ ಕಚೇರಿಗಳಲ್ಲಿ ವ್ಯವಹರಿಸುವ ತಿಳುವಳಿಕೆ ಇಲ್ಲದೇ ಇದ್ದುದರಿಂದ, ಸದರಿ ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ಸರ್ಕಾರಿ ಕಚೇರಿಗಳಲ್ಲಿ ವ್ಯವಹರಿಸಲು ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರಿಗೆ ತಿಳಿಸುತ್ತಿದ್ದರೆಂದು, ಅದರಂತೆ ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರು ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ಸರ್ಕಾರಿ ಕಚೇರಿಗಳಲ್ಲಿ ವ್ಯವಹರಿಸುತ್ತಿದ್ದರೆಂದು, ಆ ರೀತಿ ವ್ಯವಹರಿಸುವ ಸಮಯದಲ್ಲಿ ತಮ್ಮ ತಂದೆಯ ತಿಳುವಳಿಕೆಗೆ ಇಲ್ಲದೆ ತಮ್ಮ ತಂದೆಯವರ ಸಹಿಯನ್ನು ಪಡೆದುಕೊಂಡು ದುರುಪಯೋಗಪಡಿಸಿಕೊಂಡು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆಂದು ವಾದಿಯರು ಪ್ರತಿಸಾಧನೆ ಮಾಡಿರುತ್ತಾರೆ. ಅಲ್ಲದೆ ಪಿ.ಡಬ್ಲೂ-1 ರವರು ಸಹ ಸಾಕ್ಷ್ಯ ನುಡಿದಿರುತ್ತಾರೆ.

19. ಸದರಿ ಅಂಶಗಳನ್ನು ಪ್ರತಿವಾದಿಯರು ಅಲ್ಲಗಳೆದಿರುತ್ತಾರೆ. ಅಲ್ಲದೆ ಸದರಿ ದಾವಾಸ್ತಿ ಸರ್ವೆ ನಂ.610 ರ ಖಾತೆಯು ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರ ಹೆಸರಿನಲ್ಲಿ ಇರುತ್ತದೆಂಬ ಬಗ್ಗೆ ಹಾಗೂ ದಾವಾಸ್ತಿ ಸರ್ವೆ ನಂ.611 ರ ಖಾತೆಯು ತಮ್ಮ ತಂದೆ ಮೃತ ಮಡಿವಾಳಪ್ಪನ ಹೆಸರಿನಲ್ಲಿ ಇರುತ್ತದೆಂಬ ಬಗ್ಗೆ ಸದರಿ ವಾದಿಯರು 1973-74 ರಿಂದ 1977-78

ರ ನಿ.ಪಿ.8 ಮತ್ತು 9 ರ ಪಹಣಿ ಪತ್ರಿಕೆಗಳನ್ನು ಮತ್ತು 1978-79 ರಿಂದ 1982-83 ರ ನಿ.ಪಿ.10 ರ ಪಹಣಿ ಪತ್ರಿಕೆಯನ್ನು, ಅದೇ ರೀತಿ 1968-69 ರಿಂದ 2013-14 ರವರೆಗೂ ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ತಮ್ಮ ತಂದೆ ಮಡಿವಾಳಪ್ಪ ತಂದೆ ರೇವಣಸಿದ್ದಪ್ಪ ಧನಶೆಟ್ಟಿ ಇವರ ಹೆಸರಿನಲ್ಲಿ ಇರುತ್ತದೆಂಬ ಬಗ್ಗೆ ನಿ.ಪಿ.53 ರಿಂದಂ 72 ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ.

20. ಆದರೆ ಸದರಿ ಪ್ರತಿವಾದಿಯರು 1971 ರಲ್ಲಿ ಆದ ಕುಟುಂಬದ ಪಾಲಿನಲ್ಲಿ ದಾವಾಸ್ತಿ ಸರ್ವೆ ನಂ.610 ತಮ್ಮ ತಂದೆ ಚಂದ್ರಶ್ಯಾ ರವರ ಹಿಸ್ಸೆಗೆ ಬಂದಿತ್ತೆಂದು, ದಾವಾಸ್ತಿ ಸರ್ವೆ ನಂ.611 ವಾದಿಯರ ತಂದೆ ಮಡಿವಾಳಪ್ಪನವರ ಹಿಸ್ಸೆಗೆ ಬಂದಿತ್ತೆಂದು, ಅದರಂತೆ ದಾವಾಸ್ತಿ ಸರ್ವೆ ನಂ.610 ರ ಖಾತೆಯು ತಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆಂದು, ಅವರ ಮರಣದ ನಂತರ ತಾವು ಮಾಲೀಕರು ಹಾಗೂ ಸ್ವಾಧೀನದಾರರಾಗಿದ್ದು, ತಮ್ಮ ಹೆಸರಿಗೆ ಖಾತೆ ಇರುತ್ತದೆಂದು ತಿಳಿಸಿರುತ್ತಾರೆ.

21. ಆದರೆ ಸದರಿ ಪ್ರತಿವಾದಿಯರು 1971 ರಲ್ಲಿ ತಮ್ಮ ತಂದೆ ಚಂದ್ರಶ್ಯಾ ಮತ್ತು ವಾದಿಯರ ತಂದೆ ಮಡಿವಾಳಪ್ಪನವರ ಕುಟುಂಬದಲ್ಲಿ ಪಾಲಾಗಿರುತ್ತದೆಂಬ ಬಗ್ಗೆ ಹಾಗೂ ಸದರಿ ಪಾಲಿನ ಪ್ರಕಾರ ದಾವಾಸ್ತಿ ಸರ್ವೆ ನಂ.610 ಪ್ರತಿವಾದಿಯರ ತಂದೆ ಚಂದ್ರಶ್ಯಾರವರಿಗೆ ಮತ್ತು ದಾವಾಸ್ತಿ ಸರ್ವೆ ನಂ.611 ವಾದಿಯರ ತಂದೆ ಮಡಿವಾಳಪ್ಪನ ಹಿಸ್ಸೆಗೆ ಬಂದಿರುತ್ತದೆಂಬ ಬಗ್ಗೆ ಹಾಗೂ ಆ ಪ್ರಕಾರವಾಗಿ ಪಾಲಾದ 1971 ರಿಂದಲೂ ಸಹ ತಮ್ಮ

ತಂದೆಯ ಹೆಸರಿಗೆ ಖಾತೆ ವರ್ಗಾವಣೆಯಾಗಿದ್ದು, ಪಹಣಿ ಪತ್ರಿಕೆಗಳಲ್ಲಿ ಖಾತೆ ಇರುತ್ತದೆಂಬ ಬಗ್ಗೆ ಹಾಗೂ ತಮ್ಮ ತಂದೆಯವರು ಕಂದಾಯವನ್ನು ಪಾವತಿಸಿಕೊಂಡು ಬರುತ್ತಿದ್ದಾರೆಂಬ ಬಗ್ಗೆ ಯಾವುದೇ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುವುದಿಲ್ಲ.

22. ಆದರೆ ವಾದಿಯರು ಹಾಜರುಪಡಿಸಿದ ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 24 ಗುಂಟೆಗಳಿಗೆ 1973-74 ರಿಂದ 1977-78 ರ ನಿ.ಪಿ.8 ಮತ್ತು 9 ರ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ, ಸದರಿ ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 24 ಗುಂಟೆಗಳ ಖಾತೆಯು ವಾದಿಯರ ತಂದೆ ಮಡಿವಾಳಪ್ಪ ತಂದೆ ರೇವಣಸಿದ್ದಪ್ಪ ಧನಶೆಟ್ಟಿ ಇವರ ಹೆಸರಿಗೆ ಕಬ್ಜೆ ವ ಸ್ವಾಧೀನದಾರರ ಕಾಲಂ ನಂ.9 ರಲ್ಲಿ ದಾಖಲಾಗಿರುತ್ತದೆಂದು, 1976-77 ರಿಂದ ಚಂದ್ರಶ್ಯಾ ತಂದೆ ರೇವಣಸಿದ್ದಪ್ಪ ಧನಶೆಟ್ಟಿ ಇವರ ಹೆಸರು ದಾಖಲಾಗಿರುತ್ತದೆಂದು ಕಂಡುಬರುತ್ತದೆ. ಅದೇ ಪ್ರಕಾರ ನಿ.ಪಿ.10 ರ ಪಹಣಿ ಪತ್ರಿಕೆಯಲ್ಲಿಯೂ ಸಹ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರು ಪ್ರಥಮವಾಗಿ ದಾಖಲಾಗಿದ್ದರೂ ಸಹ ಆ ನಂತರ ಪುನಃ 1980-81 ರಿಂದ ಮಡಿವಾಳಪ್ಪನ ಹೆಸರು ದಾಖಲಾಗಿರುತ್ತದೆ, ಆದರೆ 1976-77 ರಿಂದ 1980-81 ರವರೆಗೆ ಅಂದರೆ ಕೇವಲ 3-4 ವರ್ಷಗಳವರೆಗೆ ಮಾತ್ರ ಪ್ರತಿವಾದಿಯರ ತಂದೆಯ ಹೆಸರು ದಾಖಲಾಗಿದ್ದು, ನಂತರ ಪುನಃ ವಾದಿಯರ ತಂದೆಯ ಹೆಸರು ದಾಖಲಾಗಿರುವುದು ಕಂಡುಬರುತ್ತದೆ. ಆ ನಂತರ ಪ್ರತಿವಾದಿಯರ ತಂದೆ ಚಂದ್ರಶ್ಯಾ ತಂದೆ ರೇವಣಸಿದ್ದಪ್ಪಾ ಧನಶೆಟ್ಟಿ ಇವರ ಹೆಸರು ತೆಗೆದು

ಹಾಕಿ 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆಂಬುದು, ಆ ಪ್ರಕಾರ 1983-84 ರಿಂದ 2016-17 ರವರೆಗೂ ನಿ.ಪಿ.11 ರಿಂದ 31 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ದಾವಾಸ್ತಿ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 33 ಗುಂಟೆಗಳ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಅಲ್ಲದೆ ದಾವಾಸ್ತಿ ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯು 1983-84 ರಿಂದ 2016-17 ರವರೆಗೂ ನಿ.ಪಿ.37 ರಿಂದ 52 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುವುದು ಕಂಡುಬರುತ್ತದೆ. ಆದರೆ 1976-77 ರಲ್ಲಿ ತಮ್ಮ ತಂದೆಯ ಹೆಸರಿಗೆ ಪಾಲಿನ ಪ್ರಕಾರ ಖಾತೆಯಾಗಿರುತ್ತದೆಂದು ತಿಳಿಸಿದ್ದರೂ ಸಹ, ಆದರೆ ಕೇವಲ 3-4 ವರ್ಷಗಳವರೆಗೆ ಮಾತ್ರ ಪ್ರತಿವಾದಿಯ ತಂದೆಯ ಹೆಸರು ದಾಖಲಾಗಿದ್ದು, ನಂತರ ಪುನಃ ವಾದಿಯರ ತಂದೆಯ ಹೆಸರು ದಾಖಲಾಗಿದ್ದು, ನಂತರ 1983-84 ರಿಂದ ಒಟ್ಟು ವಿಸ್ತೀರ್ಣ 30 ಎಕರೆ 24 ಗುಂಟೆಗಳಲ್ಲಿ 16 ಎಕರೆ 24 ಗುಂಟೆಗಳು ನಿ.ಪಿ.10 ರ ಪ್ರಕಾರ ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರ ಹೆಸರಿನಲ್ಲಿ ಖಾತೆಯಾಗಿದ್ದು, ಆ ನಂತರ 1 ನೇ ಪ್ರತಿವಾದಿಯ ಹೆಸರಿನಲ್ಲಿ 16 ಎಕರೆ 33 ಗುಂಟೆಗಳು ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ 14 ಎಕರೆಗಳ ಖಾತೆಯಾಗಿರುವುದು ಕಂಡುಬರುತ್ತದೆ.

23. ಸದರಿ ಪ್ರತಿವಾದಿಯರ ಲಿಖಿತ ಹೇಳಿಕೆಯ ಪ್ರತಿಸಾಧನೆಯನ್ನು ಹಾಗೂ ಡಿ.ಡಬ್ಲ್ಯೂ-1 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ 1971 ರಲ್ಲಿ ತಮ್ಮ ತಂದೆ ಚಂದ್ರಶ್ಯಾ ಮತ್ತು ವಾದಿಯರ

ತಂದೆ ಮಡಿವಾಳಪ್ಪಾ ಇವರ ನಡುವೆ ಆದ ಪಾಲಿನಲ್ಲಿ ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 24 ಗುಂಟೆಗಳು ತಮ್ಮ ತಂದೆಯ ಸ್ವಾಧೀನಕ್ಕೆ ಬಂದಿದ್ದಲ್ಲಿ 1978-79 ರಲ್ಲಿ ನಿ.ಪಿ.10 ರಲ್ಲಿ ಕಂಡುಬರುವಂತೆ 16 ಎಕರೆ 24 ಗುಂಟೆಗಳನ್ನು ತಮ್ಮ ತಂದೆಯ ಹೆಸರಿನಲ್ಲಿ ಏಕೆ ಕಡಿಮೆ ವಿಸ್ತೀರ್ಣ ಖಾತೆಯಾಗಿರುತ್ತದೆಂಬುದನ್ನು ಡಿ.ಡಬ್ಲ್ಯೂ-1 ರವರು ತಮ್ಮ ಲಿಖಿತ ಹೇಳಿಕೆಯಲ್ಲಾಗಲಿ ಅಥವಾ ಸಾಕ್ಷ್ಯದಲ್ಲಿ ತಿಳಿಸಿರುವುದಿಲ್ಲ. ಅಲ್ಲದೆ ನಿ.ಪಿ.10 ರಲ್ಲಿ ಕಂಡುಬರುವಂತೆ 16 ಎಕರೆ 24 ಗುಂಟೆಗಳು ಪ್ರತಿವಾದಿಯ ತಂದೆ ಚಂದ್ರಶ್ಯಾ ಇವರ ಹೆಸರಿನಲ್ಲಿ ದಾಖಲಾಗಿದ್ದರೂ ಸಹ 1980-81 ರಿಂದ ಪುನಃ ವಾದಿಯರ ತಂದೆ ಮಡಿವಾಳಪ್ಪನ ಹೆಸರು ದಾಖಲಾಗಿರುತ್ತದೆ. ತದನಂತರ ಚಂದ್ರಶ್ಯಾ ರವರ ಹೆಸರು ತೆಗೆದು ಹಾಕಿ 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ. ಅಲ್ಲದೆ ನಿ.ಪಿ.11 ರಿಂದ 31 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ಸರ್ವೆ ನಂ.610/1 ರ 16 ಎಕರೆ 33 ಗುಂಟೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಮತ್ತು ನಿ.ಪಿ.33 ರಿಂದ 52 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ 1983-84 ರಿಂದ 2016-17 ರವರೆಗೂ ಸಹ ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುವುದು ಕಂಡುಬರುತ್ತದೆ. ಆದರೆ ಸದರಿ ದಾವಾಸ್ತಿಯು ವಾದಿಯ ತಂದೆ ಹಿಸ್ಸೆಗೆ ಬಂದಿರುತ್ತದೆಂಬುದನ್ನು ವಾದಿಯರು ಅಲ್ಲಗಳೆದಿರುತ್ತಾರೆ.

24. ಅಲ್ಲದೆ ಸದರಿ ಆಸ್ತಿಯು ನಿ.ಪಿ.8 ರಿಂದ 10 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ 1973-74 ರಿಂದ 1980-81 ರವರೆಗೂ ಸಹ ವಾದಿಯರ ತಂದೆ ಮಡಿವಾಳಪ್ಪನಿಂದ ಪ್ರತಿವಾದಿಯರ ತಂದೆ ಚಂದ್ರಶ್ಯಾ ಅವರ ಹೆಸರಿನಲ್ಲಿ ನಂತರ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರಿಂದ ವಾದಿಯರ ತಂದೆ ಮಡಿವಾಳಪ್ಪನ ಹೆಸರಿನಲ್ಲಿ ಮತ್ತು ನಂತರ ನಿ.ಪಿ.11 ರಿಂದ 52 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ಸದರಿ ದಾವಾಸ್ತಿ ಸರ್ವೆ ನಂ.610 ರಲ್ಲಿ 30 ಎಕರೆ 24 ಗುಂಟೆಗಳು ಕ್ರಮವಾಗಿ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 24 ಗುಂಟೆಗಳು ಮತ್ತು ಸರ್ವೆ ನಂ. 610/2 ರ ವಿಸ್ತೀರ್ಣ 14 ಎಕರೆಯು ವಿಭಾಗವಾಗಿ ನಿ.ಪಿ.11 ರಿಂದ 31 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ಸರ್ವೆ ನಂ.610/1 ರ 16 ಎಕರೆ 33 ಗುಂಟೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ, ಅದೇ ರೀತಿ ನಿ.ಪಿ.33 ರಿಂದ 52 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ 1983-84 ರಿಂದ 2016-17 ರಂತೆ ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯಂತೆ 2 ನೇ ಪ್ರತಿವಾದಿಗೆ ಖಾತೆಯಾಗಿದ್ದರೂ ಸಹ ಈವರೆಗೂ ಸಹ ಖಾತೆ ವರ್ಗಾವಣೆಯನ್ನು ವಾದಿಯರು ಸಕ್ಷಮ ಕಂದಾಯ ಅಧಿಕಾರಿಗಳಲ್ಲಿ ಪ್ರಶ್ನಿಸಿರುವುದಿಲ್ಲವೆನ್ನುವ ಬಗ್ಗೆ ಯಾವುದೇ ಸಂಶಯ ಇರುವುದಿಲ್ಲ. ಅಲ್ಲದೆ ಸದರಿ ವಿಚಾರವು ತಮ್ಮ ಗಮನಕ್ಕೆ ಬಂದಿರುವುದಿಲ್ಲವೆಂದು ವಾದಿಯರು ತಿಳಿಸಿರುತ್ತಾರೆ.

25. ಆದರೆ ಸದರಿ ಪಿ.ಡಬ್ಲೂ-1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ, ತಮ್ಮ ತಂದೆ ದಿನಾಂಕ 18-11-2002 ರಲ್ಲಿ ತೀರಿಕೊಂಡಿರುತ್ತಾರೆಂದು ಒಪ್ಪಿಕೊಂಡಿರುತ್ತಾರೆ. ಅಂದರೆ

ತಮ್ಮ ತಂದೆ 2002 ರಲ್ಲಿ ತೀರಿಕೊಳ್ಳುವವರೆಗೂ ಸಹ 1973-74 ರಿಂದ 1980-81 ರವರೆಗೆ ಪ್ರತಿವಾದಿಯರ ತಂದೆ ಚಂದ್ರಶ್ಯಾ ರವರ ಹೆಸರಿನಲ್ಲಿ, ಆ ನಂತರ 1983-84 ರಿಂದ 2016-17 ರವರೆಗೂ ಸಹ ಸದರಿ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇರುವುದನ್ನು ವಾದಿಯರ ತಂದೆಯು ತನ್ನ ಜೀವಿತ ಕಾಲದಲ್ಲಿ ಪ್ರಶ್ನಿಸಿರುವುದಿಲ್ಲವೆಂಬುದನ್ನು ನ್ಯಾಯಾಲಯವು ಪರಿಶೀಲಿಸಬೇಕಾಗುತ್ತದೆ. ತನ್ನ ಹೆಸರಿನಲ್ಲಿದ್ದ ಸರ್ವೆ ನಂ.610 ರ ಖಾತೆಯು ಮೊದಲಿಗೆ ಪ್ರತಿವಾದಿಯರ ತಂದೆ ಚಂದ್ರಶ್ಯಾ ಮತ್ತು ಅವರ ಮರಣದ ನಂತರ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿದ್ದರೂ ಸಹ ತನ್ನ ಮರಣದ ದಿನಾಂಕ 18-11-2002 ರವರೆಗೂ ಸಹ ಪ್ರತಿವಾದಿಯರ ತಂದೆ ಹಾಗೂ ಪ್ರತಿವಾದಿಗಳ ಹೆಸರಿಗೆ ಖಾತೆ ಇರುವುದನ್ನು ಪ್ರಶ್ನಿಸದೇ ಇರುವುದನ್ನು ಪರಿಶೀಲಿಸಿದಾಗ, ವಾದಿಯರ ದಾವಾಂಶದ ಬಗ್ಗೆ ಹಾಗೂ ಪಿ.ಡಬ್ಲೂ-1 ರವರ ಸಾಕ್ಷ್ಯದ ಬಗ್ಗೆ ಸಂಶಯ ಉದ್ಭವಿಸುತ್ತದೆ. ಅಲ್ಲದೆ 2002 ರಲ್ಲಿ ತಮ್ಮ ತಂದೆ ತೀರಿಕೊಂಡ ನಂತರ ಈ ದಾವೆ ಸಲ್ಲಿಸಿದ 2017 ರವರೆಗೂ ಸಹ ಸದರಿ ದಾವಾಸ್ತಿ ಸರ್ವೆ ನಂ.610 ರ ಖಾತೆಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಇರುವುದನ್ನು ಸಹ ವಾದಿಯರು ಪ್ರಶ್ನಿಸಿರುವುದಿಲ್ಲವೆಂಬುದನ್ನು ಪರಿಶೀಲಿಸಿದಾಗ, ಈ ಬಗ್ಗೆ ಸಂಶಯ ಉದ್ಭವಿಸುತ್ತದೆ. ಆದರೆ ಆ ಕಾರಣ ಮಾತ್ರದಿಂದ ಸದರಿ ದಾವಾಸ್ತಿಗೆ ವಾದಿಯರ ತಂದೆ ಮಾಲೀಕರಾಗಿದ್ದರೆಂಬುದನ್ನು ನಿರಾಕರಿಸಲು ಸಾಧ್ಯವಿರುವುದಿಲ್ಲ. ಅಲ್ಲದೆ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರಿಗೆ ಪಾಲಿನಲ್ಲಿ ಹಿಸ್ಸೆಗೆ ಬಂದು ಮಾಲೀಕರಾಗಿರುತ್ತಾರೆಂಬುದನ್ನು ಅಂಗೀಕರಿಸಲು ಸಾಧ್ಯವಿರುವುದಿಲ್ಲ. 1976-77

ರಿಂದಲೂ ಸಹ ಪ್ರತಿವಾದಿಯರ ತಂದೆ ಚಂದ್ರಶ್ಯಾ ಹೆಸರಿನಲ್ಲಿ, ಆ ನಂತರ 1983-84 ರಿಂದ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇದ್ದರೂ ಸಹ, ಆದರೆ ಸದರಿ ಖಾತೆ ಬದಲಾವಣೆಯು ಯಾವುದೇ ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ಅಥವಾ ಪಾಲು ಪತ್ರದ ಮೂಲಕ ಅಥವಾ ನ್ಯಾಯಾಲಯದ ತೀರ್ಪು ಹಾಗೂ ಡಿಕ್ರಿಯ ಮೂಲಕ ಪ್ರತಿವಾದಿಯರ ತಂದೆ ಹಾಗೂ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿರುತ್ತದೆನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಪ್ರತಿವಾದಿಯರು ಹಾಜರುಪಡಿಸಿರುವುದಿಲ್ಲ. ನಂತರ 1971-72 ರಲ್ಲಿ ಆದ ಪಾಲಿನಲ್ಲಿ ದಾವಾಸ್ತಿ ಸರ್ವೆ ನಂ.610 ತಮ್ಮ ತಂದೆಯವರ ಹಿಸ್ಸೆಗೆ ಬಂದಿರುತ್ತದೆಂದು ತಿಳಿಸಿರುವುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ.

26. ಅಲ್ಲದೆ ಪ್ರತಿವಾದಿಯರು ಸಹ ದಾವಾಸ್ತಿ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 35 ಗುಂಟೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆಂಬ ಬಗ್ಗೆ ನಿ.ಪಿ.11 ಮತ್ತು 14 ನ್ನು ಹಾಗೂ ದಾವಾಸ್ತಿ ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆಂಬ ಬಗ್ಗೆ ನಿ.ಡಿ.2, 12 ಮತ್ತು 13 ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದರೂ ಸಹ ಹಾಗೂ ಅದೇ ರೀತಿ ದಾವಾಸ್ತಿ ಸರ್ವೆ ನಂ.610/1 ಮತ್ತು 610/2 ರ ಆಸ್ತಿಗಳಿಗೆ 1 ಮತ್ತು 2 ನೇ ಪ್ರತಿವಾದಿಯರು ನಿ.ಡಿ.7 ಮತ್ತು 8 ರಂತೆ ಕಂದಾಯವನ್ನು ಪಾವತಿಸಿರುತ್ತಾರೆಂಬ ಬಗ್ಗೆ ಕಂದಾಯ ಪಾವತಿ ರಸೀದಿಗಳನ್ನು ಹಾಜರುಪಡಿಸಿದ್ದರೂ ಸಹ, ಆ ಮಾತ್ರಕ್ಕೆ ಸದರಿ ಪ್ರತಿವಾದಿಯರು ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33

ಗುಂಟೆಗಳಿಗೆ ಮತ್ತು ಆ ನಂತರದಲ್ಲಿ ಸದರಿ ದಾವಾಸ್ತಿ ಸರ್ವೆ ನಂ.610 ರ ಆಸ್ತಿಯು ಕ್ರಮವಾಗಿ 610/1 ರ ವಿಸ್ತೀರ್ಣ 16 ಎಕರೆ 33 ಗುಂಟೆಗಳೆಂದು ಮತ್ತು ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯನ್ನು ವಿಭಾಗವಾಗಿ ಆ ಪ್ರಕಾರವಾಗಿ 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇರುತ್ತದೆಂದ ಮಾತ್ರಕ್ಕೆ ಪ್ರತಿವಾದಿಯರ ಮಾಲೀಕತ್ವದ ಹಕ್ಕನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ.

27. ಅಲ್ಲದೆ ಸದರಿ ಡಿ.ಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯಕ್ಕೆ ಸಮರ್ಥನೆಗಾಗಿ ದಾವಾಸ್ತಿ ಸರ್ವೆ ನಂ.610 ರ ನಿ.ಡಿ.6 ರ ನಕ್ಷೆಯನ್ನು ಹಾಜರು ಪಡಿಸಿದ್ದು, ಸದರಿ ನಕ್ಷೆಯನ್ನು ಪರಿಶೀಲಿಸಿದಾಗ ಸದರಿ ಸರ್ವೆ ನಂ.610 ರ ಆಸ್ತಿಯು ಅಖಂಡವಾಗಿ ಇರುವುದು ಹಾಗೂ ಸದರಿ ಪ್ರತಿವಾದಿಯರು ಹೇಳಿದಂತೆ ಸರ್ವೆ ನಂ.610/1 ಮತ್ತು 610/2 ರಂತೆ ಪೋಡಿಯಾಗಿರುತ್ತದೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ. ಸದರಿ 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಕ್ರಮವಾಗಿ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 33 ಗುಂಟೆಗಳು ಮತ್ತು ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯಂತೆ ಭಾಗವಾಗಿದ್ದಲ್ಲಿ ಆ ಪ್ರಕಾರವಾಗಿ ಸದರಿ ಅಖಂಡ ಸರ್ವೆ ನಂ.610 ಪೋಡಿಯಾಗಿರುತ್ತದೆಂಬ ಬಗ್ಗೆ ನಕ್ಷೆಯನ್ನು ಹಾಗೂ ನಮೂನೆ -10 ರ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕೇವಲ ಪ್ರತಿವಾದಿಯರು ಲಿಖಿತ ಹೇಳಿಕೆಯ ಮತ್ತು ಸಾಕ್ಷ್ಯದ ಪ್ರತಿಸಾಧನೆಯಂತೆ ಸದರಿ

ದಾವಾಸ್ತಿಯು ಯಾವುದೇ ಪಾಲು ವಿಭಾಗವಾಗಿರುವುದಿಲ್ಲವೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ.

28. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ನಿ.ಪಿ.80 ರ ಕ್ರಯಪತ್ರದಂತೆ ಸದರಿ ದಾವಾಸ್ತಿ ಸರ್ವೆ ನಂ.610 ರ 30 ಎಕರೆ 33 ಗುಂಟೆಗಳನ್ನು ಮತ್ತು 611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳನ್ನು ವಾದಿಯರ ತಂದೆ ಮಡಿವಾಳಪ್ಪನು ಖರೀದಿಸಿರುವುದರಿಂದ ಸದರಿ ದಾವಾಸ್ತಿಗಳಿಗೆ ವಾದಿಯರ ತಂದೆ ಮಡಿವಾಳಪ್ಪನು ಮಾಲೀಕರಾಗಿದ್ದರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಅಲ್ಲದೆ ಸದರಿ ಮಡಿವಾಳಪ್ಪನು ತಾನು ಖರೀದಿಸಿದ ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 14 ಗುಂಟೆಗಳನ್ನು ಯಾವುದೇ ನೊಂದಾಯಿತ ಪಾಲು ಪತ್ರದ ಮೂಲಕವಾಗಲಿ ಅಥವಾ ಹಕ್ಕು ಬಿಡುಗಡೆ ಪತ್ರದ ಮೂಲಕ ತನ್ನ ಸಹೋದರನಾದ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರಿಗೆ ಬಿಟ್ಟುಕೊಟ್ಟಿರುತ್ತಾರೆಂಬ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇರುವುದರಿಂದ, ಕೇವಲ ಪಾಲಿನಲ್ಲಿ ಸದರಿ ಆಸ್ತಿಯು ತಮ್ಮ ತಂದೆಯ ಹಿಸ್ಸೆಗೆ ಬಂದಿತ್ತೆನ್ನುವ ಪ್ರತಿವಾದಿಯರ ಲಿಖಿತ ಹೇಳಿಕೆಯ ಪ್ರತಿಸಾಧನೆಯನ್ನು ಮತ್ತು ಡಿ.ಡಬ್ಲೂ-1 ರವರ ಸಾಕ್ಷ್ಯವನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ.

29. ಅಲ್ಲದೆ ಸದರಿ ಪಿ.ಡಬ್ಲೂ-1 ರವರು ತಮ್ಮ ಸಾಕ್ಷ್ಯಕ್ಕೆ ಸಮರ್ಥನೆಗಾಗಿ ನಿಪಿ.78 ರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಸದರಿ ಪ್ರಮಾಣ ಪತ್ರವನ್ನು 1 ನೇ ವಾದಿಯು

ಅಕ್ಕಲಕೋಟದ ತಾಲೂಕು ದಂಡಾಧಿಕಾರಿಗಳ ಸಮಕ್ಷಮದಲ್ಲಿ ಹಾಜರುಪಡಿಸಿದ್ದು, ತಮ್ಮ ತಂದೆಯ ವಾರಸುದಾರರ ಬಗ್ಗೆ ವಿವರವನ್ನು ತಿಳಿಸಿರುತ್ತಾರೆ. ಅಲ್ಲದೆ ನಿ.ಪಿ.79 ಮತ್ತು 80 ರ ಪ್ರಕಾರ ಸದರಿ ದಾವಾಸ್ತಿ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 23 ಗುಂಟೆಗಳು ಮತ್ತು ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇದ್ದರೂ ಸಹ, ಆ ಪ್ರಕಾರವಾಗಿ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಮಾಡಲು ಸಂಬಂದಪಟ್ಟ ಕಂದಾಯ ನಿರೀಕ್ಷಕರು ವರದಿ ಸಲ್ಲಿಸಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಆದರೆ ನ್ಯಾಯಾಲಯವು ಈಗಾಗಲೇ ನಿರ್ಣಯಿಸಿದಂತೆ ಸದರಿ ದಾವಾಸ್ತಿ ಸರ್ವೆ ನಂ.610 ನ್ನು ವಾದಿಯರ ತಂದೆ ಮಡಿವಾಳಪ್ಪನು ನಿ.ಪಿ.80 ರ ನೊಂದಾಯಿತ ಕ್ರಯಪತ್ರದಡಿ ಖರೀದಿಸಿರುವುದರಿಂದ ಹಾಗೂ ಸದರಿ ಆಸ್ತಿಯು ಪಾಲಿನಲ್ಲಿ ಪ್ರತಿವಾದಿಯರ ತಂದೆಗೆ ಬಂದಿರುತ್ತದೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಸದರಿ ಆಸ್ತಿಯು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹಿಸ್ಸೆಗೆ ಬಂದಿರುತ್ತದೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ. ಅಲ್ಲದೆ ಸದರಿ ಡಿ.ಡಬ್ಲೂ-1 ರವರು ತಮ್ಮ ತಂದೆಯ ನಿ.ಡಿ.15 ರ ಮರಣ ದಾಖಲೆಯನ್ನು ಹಾಜರುಪಡಿಸಿದ್ದು, ಆದರೆ ಸದರಿ ಮರಣ ದಾಖಲೆಯಲ್ಲಿ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರು ದಾಖಲಾಗಿರುವುದಿಲ್ಲ. ಹಾಗೊಂದು ವೇಳೆ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ಮತ್ತು ಡಿ.ಡಬ್ಲೂ-1 ರವರು ತಮ್ಮ ಸಾಕ್ಷ್ಯದಲ್ಲಿ ತಿಳಿಸಿದಂತೆ 1971 ರಲ್ಲಿ ಆದ ಪಾಲಿನಲ್ಲಿ ದಾವಾಸ್ತಿ ಸರ್ವೆ ನಂ.610 ರ ಆಸ್ತಿಯು ತಮ್ಮ ತಂದೆ ಚಂದ್ರಶ್ಯಾ

ಇವರ ಹಿಸ್ಸೆಗೆ ಬಂದಿದ್ದಲ್ಲಿ ನಿ.ಡಿ.15 ರ ಪ್ರಕಾರ ತಮ್ಮ ತಂದೆಯು ದಿನಾಂಕ 16-6-1972 ರಲ್ಲಿ ತೀರಿಕೊಂಡಿದ್ದಲ್ಲಿ, ತೀರಿಕೊಂಡ ನಂತರ 1976-77 ರಿಂದ ಪ್ರತಿವಾದಿಯರ ತಂದೆಯ ಹೆಸರಿಗೆ ಯಾವ ಆಧಾರದಲ್ಲಿ ಖಾತೆ ಆಗಿರುತ್ತದೆಂಬ ಬಗ್ಗೆ ಯಾವುದೇ ಸಮರ್ಥನಿಯವಾದ ಕಾರಣಗಳನ್ನು ನೀಡಿರುವುದಿಲ್ಲ. ನಿ.ಪಿ.7 ಮತ್ತು 8 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ 1976-77 ರಿಂದ ವಾದಿಯರ ತಂದೆ ಮಡಿವಾಳಪ್ಪನ ಹೆಸರಿನಿಂದ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರಿಗೆ ದಾಖಲಾಗಿದ್ದು, ಆ ಸಮಯದಲ್ಲಿ ನಿ.ಪಿ.15 ರ ಮರಣ ದಾಖಲೆಯಂತೆ 1975 ರಲ್ಲಿ ಪ್ರತಿವಾದಿಯರ ತಂದೆ ತೀರಿಕೊಂಡಿರುತ್ತಾರೆ. ತೀರಿಕೊಂಡ ನಂತರ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರಿಗೆ ಖಾತೆ ಬದಲಾವಣೆಯಾಗಲು ಅವಕಾಶ ಇರುವುದಿಲ್ಲ. ಅಲ್ಲದೆ 1976-77 ರಿಂದ 1980-81 ರ 4-5 ವರ್ಷಗಳವರೆಗೆ ಮಾತ್ರ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ. ಆ ನಂತರ ಪುನಃ ವಾದಿಯರ ತಂದೆ ಮಡಿವಾಳಪ್ಪನ ಹೆಸರಿಗೆ ದಾಖಲಾಗಿರುತ್ತದೆ. ಆ ಸಮಯದಲ್ಲಿ ಪ್ರತಿವಾದಿಯರ ತಂದೆಯ ಮರಣದ ನಂತರ ಪ್ರತಿವಾದಿಯರು ತಮ್ಮ ಹೆಸರಿಗೆ ಖಾತೆ ಮಾಡಿಕೊಳಬೇಕಾಗಿತ್ತು, ಅಲ್ಲದೆ ವಾದಿಯರ ತಂದೆ ಮಡಿವಾಳಪ್ಪನ ಹೆಸರಿಗೆ ಪುನಃ ಖಾತೆ ಬದಲಾವಣೆಯಾಗಿದ್ದಲ್ಲಿ ಅದನ್ನು ಪ್ರಶ್ನಿಸಬೇಕಾಗಿತ್ತು, ಆ ನಂತರ ಯಾವ ಕಾರಣಗಳ ಮತ್ತು ಆಧಾರದಲ್ಲಿ ಸದರಿ ಆಸ್ತಿಯು ವಾದಿಯರ ತಂದೆ ಮಡಿವಾಳಪ್ಪನ ಹೆಸರಿಗೆ ಖಾತೆಯಾಗಿರುತ್ತದೆಂಬ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಮೇಲ್ಕಂಡ ಎಲ್ಲಾ ಅಂಶಗಳನ್ನು

ಪರಿಗಣಿಸಿದಾಗ, ಸದರಿ ಪ್ರತಿವಾದಿಯರು ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 24 ಗುಂಟೆಗಳಿಗೆ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆಂಬುದನ್ನು ಹಾಗೂ ಆ ಪೂರ್ವದಲ್ಲಿ ಸದರಿ ಆಸ್ತಿಯು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರಿಗೆ ಅವರ ಸಹೋದರರಲ್ಲಿ ಆದ ಪಾಲಿನಲ್ಲಿ ಹಿಸ್ಸೆಗೆ ಬಂದಿರುತ್ತದೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ.

30. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿ ಸರ್ವೆ ನಂ.610 ರ ಆಸ್ತಿಯು ವಾದಿಯರ ತಂದೆ ಮೃತ ಮಡಿವಾಳಪ್ಪನು ಖರೀದಿಸಿದ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರ ಮರಣದ ನಂತರ ವಾದಿಯರು ಮಾಲೀಕರು ಹಾಗೂ ಸ್ವಾಧೀನದಾರರಾಗಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಕೇವಲ ಸದರಿ ಪಹಣಿ ಪತ್ರಿಕೆಗಳ ಆಧಾರದಲ್ಲಿ ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆಂದ ಮಾತ್ರಕ್ಕೆ ಹಾಗೂ ಆ ಪೂರ್ವದಲ್ಲಿ ಕೇವಲ 3-4 ವರ್ಷಗಳಿಗೆ ಸಂಬಂದಪಟ್ಟಂತೆ ತಮ್ಮ ತಂದೆ ಚಂದ್ರಶ್ಯಾ ಇವರ ಹೆಸರು ದಾಖಲಾಗಿರುತ್ತದೆಂದ ಮಾತ್ರಕ್ಕೆ ಸದರಿ ದಾವಾಸ್ತಿ ಸರ್ವೆ ನಂ.610 ಪ್ರತಿವಾದಿಯರ ತಂದೆ ಚಂದ್ರಶ್ಯಾ ಹಾಗೂ ಅವರ ಮರಣದ ನಂತರ ಪ್ರತಿವಾದಿಯರು ಮಾಲೀಕರಾಗಿರುತ್ತಾರೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ. ಕೇವಲ ಪಹಣಿ ಪತ್ರಿಕೆಗಳ ಆಧಾರದಲ್ಲಿ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ. ಸದರಿ ದಾವಾಸ್ತಿ ಸರ್ವೆ ನಂ.610

ನ್ನು ಹೊರತುಪಡಿಸಿ ಸರ್ವೆ ನಂ.611 ಕ್ಕೆ ಪ್ರತಿವಾದಿಯರಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ಸರ್ವೆ ನಂ.610 ನ್ನು ವಾದಿಯರ ತಂದೆ ಮಡಿವಾಳಪ್ಪನು ನಿ.ಪಿ.80 ರ ನೊಂದಾಯಿತ ಕ್ರಯಪತ್ರದ ದಿನದಿಂದಲೂ ಸಹ ಸದರಿ ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ತಂದೆಯ ಹೆಸರಿನಲ್ಲಿ ಇರುವುದು ನಿ.ಪಿ.55 ರಿಂದ 72 ರಂತೆ ಪಹಣಿ ಪತ್ರಿಕೆಗಳ ಮೂಲಕ ಕಂಡುಬರುತ್ತದೆ. ಆ ನಂತರ ನಿ.ಪಿ.77 ರ ಹಕ್ಕು ಬದಲಾವಣೆ ಆದೇಶದಡಿ ಸದರಿ ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು 1, 2, 4 ಮತ್ತು 5 ನೇ ವಾದಿಯರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿದ್ದು, ಆ ಪ್ರಕಾರವಾಗಿ ನಿ.ಪಿ.73 ರಿಂದ 75 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ಅವರ ಹೆಸರಿನಲ್ಲಿ ಕ್ರಮವಾಗಿ 5 ಎಕರೆ 30 ಗುಂಟೆಗಳು ಮತ್ತು ತಲಾ 5 ಎಕರೆ 31 ಗುಂಟೆಗಳಂತೆ ಖಾತೆ ಬದಲಾವಣೆ ಆಗಿರುತ್ತದೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ.

31. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿ ಸರ್ವೆ ನಂ.611 ಕ್ಕೆ ಮೃತ ವಾದಿಯರ ತಂದೆ ಮಡಿವಾಳಪ್ಪ ಹಾಗೂ ಅವರ ಮರಣದ ನಂತರ ವಾದಿಯರು ಮಾಲೀಕರು ಹಾಗೂ ಸ್ವಾಧೀನದಾರರಾಗಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಅಲ್ಲದೆ ಸದರಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ಹಾಗೂ ಆ ಪೂರ್ವದಲ್ಲಿ ಮೃತ ಮಡಿವಾಳಪ್ಪನ ಹಕ್ಕನ್ನು ಹಾಗೂ

ಸ್ವಾಧೀನವನ್ನು ಪ್ರತಿವಾದಿಯರು ಅಲ್ಲಗಳೆದಿರುವುದಿಲ್ಲ. ಅಲ್ಲದೆ ವಾದಿಯರ ಹಕ್ಕನ್ನು ನಿರಾಕರಿಸಿ ತಮ್ಮ ಹಕ್ಕನ್ನು ಪ್ರತಿಸಾಧನೆ ಮಾಡಿರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ವಾದಿಯರು ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33 ಗುಂಟೆಗಳು ಮತ್ತು ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳಿಗೆ ಮಾಲೀಕರು ಹಾಗೂ ಸ್ವಾಧೀನದಾರರಾಗಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಅಲ್ಲದೆ ಸದರಿ ದಾವಾಸ್ತಿ ಸರ್ವೆ ನಂ.610 ರ ಸ್ವಾಧೀನವು ವಾದಿಯರಲ್ಲಿ ಇರುತ್ತದೆಂದು ವಾದಿಯರ ವಕೀಲರು ತಿಳಿಸಿದ್ದು, ಅಲ್ಲದೆ ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ನಿ.ಪಿ.81 ಮತ್ತು 82 ರ ದಾಖಲೆಗಳನ್ನು ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ಸದರಿ ದಾಖಲೆಗಳ ಆಧಾರದಲ್ಲಿ ಪಿ.ಡಬ್ಲ್ಯೂ-1 ರವರ ಸ್ವಾಧೀನದಲ್ಲಿ ಇರುತ್ತದೆಂಬುದನ್ನು ಅಂಗೀಕರಿಸಲು ಸಾಧ್ಯವಿರುವುದಿಲ್ಲ. ಸದರಿ ದಾಖಲೆಗಳ ಅಧಾರದಲ್ಲಿ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 33 ಗುಂಟೆಗಳು ಮತ್ತು 610/2 ರ ವಿಸ್ತೀರ್ಣ 14 ಎಕರೆಯು ಪಿ.ಡಬ್ಲ್ಯೂ-1 ರವರ ಹೆಸರಿನಲ್ಲಿ ಇರುತ್ತದೆಂದು ಪರಿಗಣಿಸಿದಲ್ಲಿ, ಅದೇ ರೀತಿ ನಿ.ಪಿ.11 ರಿಂದ 31 ರ ಪಹಣಿ ಪತ್ರಿಕೆಗಳ ಪ್ರಕಾರ ಸರ್ವೆ ನಂ.610/1 ರ ವಿಸ್ತೀರ್ಣ 16 ಎಕರೆ 33 ಗುಂಟೆಗಳು ಮತ್ತು ನಿ.ಪಿ.33 ರಿಂದ 52 ರ ಪ್ರಕಾರ ದಾವಾಸ್ತಿ ಸರ್ವೆ ನಂ.610/2 ರ ವಿಸ್ತೀರ್ಣ 14 ಎಕರೆಯು ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ. ಸದರಿ ದಾಖಲೆಗಳ ಪ್ರಕಾರ ಪ್ರತಿವಾದಿಯರು ಸದರಿ ಆಸ್ತಿಯ ಸ್ವಾಧೀನವನ್ನು ಹೊಂದಿರುತ್ತಾರೆಂಬುದನ್ನು ನ್ಯಾಯಾಲಯವು ಪರಿಗಣಿಸಬೇಕಾಗುತ್ತದೆ. ಅಲ್ಲದೆ ಸದರಿ ಪ್ರತಿವಾದಿಗಳ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳಿಗೆ

ವ್ಯತಿರಿಕ್ತವಾಗಿ ವಾದಿಯರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ದಾವಾ ದಿನಾಂಕದಂದು ಸದರಿ ಸರ್ವೆ ನಂ.610 ರ ಖಾತೆಯು ತಮ್ಮ ಹೆಸರಿನಲ್ಲಿ ಇರುತ್ತದೆಂಬ ಬಗ್ಗೆ ವಾದಿಯರು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಕೇವಲ ನಿ.ಪಿ.81 ಮತ್ತು 82 ರ ವ್ಯವಸಾಯಗಾರರ ದೃಢೀಕರಣ ಪತ್ರದಲ್ಲಿ ಸದರಿ ದಾವಾಸ್ತಿ ಸರ್ವೆ ನಂ.610/1 ರ 16 ಎಕರೆ 33 ಗುಂಟೆಗಳು ಮತ್ತು 610/2 ರ 14 ಎಕರೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ದೃಢೀಕರಣ ಪತ್ರ ನೀಡಿರುತ್ತಾರೆಂದ ಮಾತ್ರಕ್ಕೆ 1 ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿದ್ದನೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ಮತ್ತು ಸರ್ವೆ ನಂ.610 ರ ವಿಸ್ತೀರ್ಣ 16 ಎಕರೆ 33 ಗುಂಟೆಗಳಿಗೆ ವಾದಿಯರು ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

32. ಅಲ್ಲದೆ ಸದರಿ ಪಿ.ಡಬ್ಲ್ಯೂ-1 ರವರ ಸಾಕ್ಷ ಸಮರ್ಥನೆಗಾಗಿ ಪಿ.ಡಬ್ಲ್ಯೂ-2 ಮತ್ತು 3 ರವರು ಸಹ ಸಮರ್ಥನೆಯನ್ನು ನೀಡಿದ್ದು, ಸದರಿ ಪಿ.ಡಬ್ಲ್ಯೂ-2 ಮತ್ತು 3 ರವರನ್ನು ಪ್ರತಿವಾದಿಯರ ವಕೀಲರು ಸುದೀರ್ಘವಾಗಿ ಪಾಟೀ ಸವಾಲು ಮಾಡಿದ್ದರೂ ಸಹ, ಆದರೆ ದಾವಾಸ್ತಿ ಸರ್ವೆ ನಂ.610 ಮತ್ತು 611 ನ್ನು ವಾದಿಯರ ತಂದೆ ಮೃತ ಮಡಿವಾಳಪ್ಪ ಮತ್ತು ಪ್ರತಿವಾದಿಯರ ತಂದೆ ಮೃತ ಚಂದ್ರಶ್ಯಾ ಇವರು ಜಂಟಿಯಾಗಿ ಖರೀದಿಸಿದ್ದು, 1971 ರಲ್ಲಿ

ಆದ ವಾಟ್ನಿ ಪ್ರಕಾರ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33 ಗುಂಟೆಗಳು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರ ಹೆಸರಿಗೆ ಬಂದಿತ್ತೆನ್ನುವ ಬಗ್ಗೆ ಮತ್ತು ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳು ವಾದಿಯರ ತಂದೆ ಮೃತ ಮಡಿವಾಳಪ್ಪನ ಹಿಸ್ಸೆಗೆ ಬಂದಿರುತ್ತದೆನ್ನುವ ಬಗ್ಗೆ ಹಾಗೂ ಆ ಪ್ರಕಾರವಾಗಿ ಸರ್ವೆ ನಂ.610 ರ ವಿಸ್ತೀರ್ಣ 33 ಎಕರೆ 33 ಗುಂಟೆಗಳು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರು ಮಾಲೀಕರು ಹಾಗೂ ಸ್ವಾಧೀನದಾರರಾಗಿದ್ದರೂ ಮತ್ತು ಅವರ ಮರಣದ ನಂತರ ಪ್ರತಿವಾದಿಯರು ಮಾಲೀಕರು ಹಾಗೂ ಸ್ವಾಧೀನದಾರರಾಗಿರುತ್ತಾರೆಂಬ ಬಗ್ಗೆ ಯಾವುದೇ ಸಾಕ್ಷವನ್ನು ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತಾರೆ.

33. ಅಲ್ಲದೆ ಸದರಿ ಡಿ.ಡಬ್ಲೂ-1 ರವರನ್ನು ವಾದಿಯರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ 1971 ರಲ್ಲಿ ವಾಟ್ನಿ ಆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ತಿಳಿಸಿದ್ದರೂ ಸಹ, ಆದರೆ ಅಂತಹ ಯಾವುದೇ ದಾಖಲೆಯನ್ನು ಪ್ರತಿವಾದಿಯರು ಹಾಜರುಪಡಿಸಿರುವುದಿಲ್ಲ. ಅಲ್ಲದೆ ಸದರಿ ಸರ್ವೆ ನಂ.610 ಮತ್ತು 611 ರ ಜಮೀನುಗಳು ಒಂದಕ್ಕೊಂದು ಹತ್ತಿಕೊಂಡಿದ್ದು, ನಡುವೆ ಯಾವುದೇ ಬಾಂದಗಳು ಇರುವುದಿಲ್ಲವೆಂದು, ಮಡಿವಾಳಪ್ಪನವರಿಗೆ ವಯಸ್ಸಾಗಿದ್ದರಿಂದ ಅವರ ಮಕ್ಕಳಾದ ವಾದಿಯರು ದಾವಾಸ್ತಿಗಳ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಅಂದರೆ ನಿಜವೆಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಸದರಿ ದಾವಾಸ್ತಿಗಳು ತಮ್ಮ ಪಾಲಿಗೆ

ಬಂದಿದ್ದು, ಅವರ ಮರಣದ ನಂತರ ತಮ್ಮ ಹಿಸ್ಸೆಗೆ ಬಂದಿರುತ್ತದೆಂಬ ಬಗ್ಗೆ ಹಾಗೂ ತಮ್ಮ ಸ್ವಾಧೀನದಲ್ಲಿ ಇರುತ್ತದೆನ್ನುವ ಪ್ರತಿವಾದಿಯರ ಲಿಖಿತ ಹೇಳಿಕೆಯ ಪ್ರತಿಸಾಧನೆಯನ್ನು ಒಪ್ಪಲು ಸಾದ್ಯವಿರುವುದಿಲ್ಲ. ಅಲ್ಲದೆ ದಾವಾಸ್ತಿಗಳ ಒಕ್ಕಲುತನವನ್ನು ಬಸ್ಸಣ್ಣನೆ ಮಾಡಿರುತ್ತಾನೆ ಅಂದರೆ ಸರಿಯೆಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಸದರಿ ಬಸಣ್ಣಾ ಪಿ.ಡಬ್ಲ್ಯೂ-1 ರವರು ಇರುತ್ತಾರೆ. ಅಲ್ಲದೆ ಸದರಿ ದಾವಾಸ್ತಿ ಸರ್ವೆ ನಂ.610 ನ್ನು ಚಂದ್ರಶ್ಯಾ ಮತ್ತು ಮಡಿವಾಳಪ್ಪ ಇವರು ಒಟ್ಟಾಗಿ ಖರೀದಿಸಿರುತ್ತಾರೆಂದು ತನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಿಸಿದ ವಿಚಾರ ಸರಿ ಇರುವುದಿಲ್ಲವೆಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಅಲ್ಲದೆ ನಿ.ಪಿ.81 ಮತ್ತು 82 ರ ಪ್ರಕಾರ ಪಿ.ಡಬ್ಲೂ-1 ರವರೆ ದಾವಾಸ್ತಿಗಳ ಸಾಗುವಳಿ ಮಾಡುತ್ತಿದ್ದಾರೆನ್ನುವ ಬಗ್ಗೆ ಕಂದಾಯ ನಿರೀಕ್ಷಕರು ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದ ವಿಚಾರ ತನಗೆ ಗೊತ್ತಿರುತ್ತದೆಂದು ಸ್ಪಷ್ಟವಾಗಿ ಒಪ್ಪಿಕೊಂಡಿದ್ದು, ಸದರಿ ವಿಚಾರ ಗೊತ್ತಾದ ನಂತರವೂ ಸಹ ತಹಶೀಲ್ದಾರರಲ್ಲಿಗೆ ಹೋಗಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲವೆಂದು ಸಹ ಒಪ್ಪಿಕೊಂಡಿರುತ್ತಾರೆ. ತಾನು 20 ವರ್ಷಗಳ ಹಿಂದೆ ದಾವಾಸ್ತಿಗೆ ಹೋಗಿದ್ದೆನೆಂದು ಡಿ.ಡಬ್ಲೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಿಳಿಸಿರುತ್ತಾರೆ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾವಾಸ್ತಿ ಸರ್ವೆ ನಂ.610 ರ ಜಮೀನು ಪ್ರತಿವಾದಿಯರ ಸ್ವಾಧೀನದಲ್ಲಿ ಇರುತ್ತದೆಂದು ಹಾಗೂ ಸದರಿಯವರು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆಂಬುದನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ.

34. ಅಲ್ಲದೆ ಸದರಿ ವಾದಿಯರು ತಮ್ಮ ತಂದೆ ಮಡಿವಾಳಪ್ಪನು ಅವಿದ್ಯಾವಂತರಾಗಿದ್ದರಿಂದ ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ಸರ್ಕಾರಿ ಕಚೇರಿಗಳಲ್ಲಿ, ಕಂದಾಯ ಅಧಿಕಾರಿಗಳಲ್ಲಿ ವ್ಯವಹರಿಸಲು ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರಿಗೆ ಹೇಳುತ್ತಿದ್ದರೆಂದು, ಆ ಪ್ರಕಾರವಾಗಿ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರು ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ಸರ್ಕಾರಿ ಕಚೇರಿಗಳಲ್ಲಿ ಹಾಗೂ ಕಂದಾಯ ಇಲಾಖೆಯಲ್ಲಿ ವ್ಯವಹರಿಸುತ್ತಿದ್ದರೆಂದು, ಆ ರೀತಿ ವ್ಯವಹರಿಸುವಾಗ ತಮ್ಮ ತಂದೆ ಹಾಗೂ ತಮ್ಮ ತಿಳುವಳಿಕೆಗೆ ಇಲ್ಲದೆ ಪ್ರತಿವಾದಿಯರ ತಂದೆ ಚಂದ್ರಶ್ಯಾ ಇವರು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

35. ಇದಕ್ಕೆ ಸಮರ್ಥನೆಗಾಗಿ ಡಿ.ಡಬ್ಲೂ-1 ರವರು ಸಹ ತಮ್ಮ ಪಾಟೀ ಸವಾಲಿನಲ್ಲಿ ಮಡಿವಾಳಪ್ಪನು ಶಾಲೆ ಕಲಿತಿರುವುದಿಲ್ಲವೆಂದು, ಆದ್ದರಿಂದ ದಾಖಲೆಗಳನ್ನು ಚಂದ್ರಶ್ಯಾ ಇವರೇ ನೋಡಿ ಓದಿ ಹೇಳುತ್ತಿದ್ದರೆಂದರೆ ಸರಿಯೆಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೆ ಮಾಡಿವಾಳಪ್ಪನಿಗೆ ಸಹಿ ಮಾಡಲು ಬರುತ್ತಿರಲಿಲ್ಲವೆಂದು ಹೆಬ್ಬೆಟ್ಟನ್ನು ಹಾಕುತ್ತಿದ್ದನೆಂದು, ಆದ್ದರಿಂದ ಅರ್ಜಿಗಳನ್ನು ನೀಡಬೇಕಾಗಿದ್ದಲ್ಲಿ ಚಂದ್ರಶ್ಯಾ ಸಹಿ ಮಾಡಿ ಕೊಡುತ್ತಿದ್ದನೆಂದರೆ ಸರಿಯೆಂದು ಒಪ್ಪಿಕೊಂಡಿರುತ್ತಾರೆ. ಸದರಿ ಅಂಶಗಳು ವಾದಿಯರ ದಾವಾಂಶಗಳಿಗೆ ಹಾಗೂ ಸಾಕ್ಷ್ಯಕ್ಕೆ ಸಮರ್ಥನೆಯನ್ನು ನೀಡಿರುತ್ತದೆ. ಸದರಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ಕೇವಲ ದಾಖಲೆಗಳಲ್ಲಿ ಪ್ರತಿವಾದಿಯರ ತಂದೆ ಚಂದ್ರಶ್ಯಾ ಹಾಗೂ ಅವರ

ಮರಣದ ನಂತರ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇರುತ್ತದೆಂದ ಮಾತ್ರಕ್ಕೆ ಪ್ರತಿವಾದಿಯರು ದಾವಾಸ್ತಿ ಸರ್ವೆ ನಂ.610 ಕ್ಕೆ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆಂಬುದನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿ, 1 ನೇ ವಿವಾದಾಂಶವನ್ನು ವಾದಿಯರ ಪರವಾಗಿ ಸಕಾರಾತ್ಮಕವಾಗಿ, 2, 3 ಮತ್ತು 5 ನೇ ವಿವಾದಾಂಶಗಳನ್ನು ಪ್ರತಿವಾದಿಯರ ವಿರುದ್ಧವಾಗಿ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

36. **4 ನೇ ವಿವಾದಾಂಶ ಃ** ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ 1971 ರಲ್ಲಿ ವಾದಿಯರ ಮತ್ತು ಪ್ರತಿವಾದಿಯರ ತಂದೆಯ ನಡುವೆ ಆದ ಪಾಲಿನಲ್ಲಿ ಸರ್ವೆ ನಂ.610 ಪ್ರತಿವಾದಿಯರ ತಂದೆಯ ಹಿಸ್ಸೆಗೆ ಮತ್ತು ಸರ್ವೆ ನಂ.611 ರ ಆಸ್ತಿಯು ವಾದಿಯರ ತಂದೆಯ ಹಿಸ್ಸೆಗೆ ಬಂದಿದ್ದು, ಆ ಪ್ರಕಾರವಾಗಿ ಖಾತೆ ಬದಲಾವಣೆಯಾಗಿದ್ದು, ಸದರಿ ಖಾತೆ ಬದಲಾವಣೆಯನ್ನು ವಾದಿಯರು ಯಾವುದೇ ಸಕ್ಷಮ ನ್ಯಾಯಾಲಯದಲ್ಲಿ ಈವರೆಗೂ ಸಹ ಪ್ರಶ್ನಿಸಿರುವುದಿಲ್ಲವೆಂದು, ಆದ್ದರಿಂದ ಸದರಿ ದಾವೆಯು ಕಾಲಪರಿಮಿತಿ ಕಾಯ್ದೆಯಡಿ ಊರ್ಜಿತವಾಗಿರುವುದಿಲ್ಲವೆಂದು ಪ್ರತಿಸಾಧನೆ ಮಾಡಿರುತ್ತಾರೆ. ಆದರೆ ತಮ್ಮ ಸಾಕ್ಷ್ಯಕ್ಕೆ ಸಮರ್ಥನೆಗಾಗಿ ಸದರಿ ಪ್ರತಿವಾದಿಯರು ಸದರಿ ದಾವಾಸ್ತಿ ಸರ್ವೆ ನಂ.610 ರ ಖಾತೆಯು ತಮ್ಮ ತಂದೆ ಮೃತ ಚಂದ್ರಶ್ಯಾ ಇವರ ಹೆಸರಿಗೆ ಖಾತೆ ಬದಲಾವಣೆಯಾಗುವ ಪೂರ್ವದಲ್ಲಿ ವಾದಿಯರ ತಂದೆ ಮೃತ ಮಡಿವಾಳಪ್ಪನವರಿಗೆ ನೋಟಿಸು ಕೊಟ್ಟಿದ್ದು, ಅವರ ಒಪ್ಪಿಗೆ ಮೇರೆಗೆ ಹಾಗೂ ಯಾವ ದಾಖಲೆಯ ಆಧಾರದಲ್ಲಿ ತಮ್ಮ ತಂದೆಯ ಹೆಸರಿಗೆ ಖಾತೆ

ಬದಲಾವಣೆ ಆಗಿರುತ್ತದೆಂಬ ಬಗ್ಗೆಯಾಗಲಿ ಹಾಗೂ ತಮ್ಮ ತಂದೆಯ ಮರಣದ ನಂತರ ಸದರಿ ದಾವಾಸ್ತಿ ಸರ್ವೆ ನಂ. 610 ರ ಖಾತೆಯು ತಮ್ಮ ಹೆಸರಿಗೆ ಖಾತೆ ಬದಲಾವಣೆಯಾಗುವ ಪೂರ್ವದಲ್ಲಿ ವಾದಿಯರ ತಂದೆ ಮೃತ ಮಡಿವಾಳಪ್ಪನ ಹಾಗೂ ವಾದಿಯರ ತಿಳುವಳಿಕೆಗೆ ನೋಟಿಸ ನೀಡುವ ಮೂಲಕ ಖಾತೆ ಬದಲಾವಣೆಯಾಗಿರುತ್ತದೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

37. ಅಲ್ಲದೆ ಯಾವುದೇ ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ಅಥವಾ ನೊಂದಾಯಿತ ದಾಖಲೆ ಮೂಲಕ ತಮ್ಮ ತಂದೆಯ ಹೆಸರಿಗೆ ಮತ್ತು ಅವರ ಮರಣದ ನಂತರ ತಮ್ಮ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮೂಲತಃ ಸದರಿ ದಾವಾಸ್ತಿಯ ಖಾತೆಯು ತಮ್ಮ ತಂದೆಯ ಹೆಸರಿಗೆ ಖಾತೆ ಬದಲಾವಣೆಯಾದ ಬಗ್ಗೆ ಸದರಿ ಪ್ರತಿವಾದಿಯರು ಯಾವುದೇ ಖಾತೆ ಬದಲಾವಣೆ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ತಮ್ಮ ತಂದೆಯ ಮರಣದ ನಂತರ ದಾವಾಸ್ತಿ ಸರ್ವೆ ನಂ.610 ರ ಆಸ್ತಿಯು ಕ್ರಮವಾಗಿ 610/1 ಮತ್ತು 610/2 ರಂತೆ ಫೋಡಿಯಾಗಿರುತ್ತದೆಂಬ ಬಗ್ಗೆ ಹಾಗೂ ಸದರಿ ಫೋಡಿ ಯಾವ ಆಧಾರದಲ್ಲಿ ಆಗಿರುತ್ತದೆ ಹಾಗೂ ಯಾವ ಆಧಾರದಲ್ಲಿ ತಮ್ಮ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆಂಬ ಬಗ್ಗೆ ಯಾವುದೇ ವರ್ಗಾವಣೆ ಆದೇಶ ಪತ್ರವನ್ನಾಗಲಿ ಅಥವಾ ಫೋಡಿ ನಕಾಶೆಯನ್ನಾಗಲಿ ಹಾಜರುಪಡಿಸಿರುವುದಿಲ್ಲ. ಅಲ್ಲದೆ ತಮ್ಮ ತಂದೆ ಮತ್ತು

ತಮ್ಮ ಹೆಸರು ದಾವಾಸ್ತಿ ಸರ್ವೆ ನಂ.610 ರ ಖಾತೆ ವರ್ಗಾವಣೆಯ ಪೂರ್ವದಲ್ಲಿ ವಾದಿಯರ ತಿಳುವಳಿಕೆಗೆ ಇರುವಂತೆ ಹಾಗೂ ಅವರ ಗಮನಕ್ಕೆ ಸದರಿ ಖಾತೆ ವರ್ಗಾವಣೆ ಆದ ವಿಚಾರ ತಿಳಿಸಿರುತ್ತೆನೆಂಬ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಹೀಗಿರುವಲ್ಲಿ ವಾದಿಯರ ತಂದೆ ಹಾಗೂ ವಾದಿಯರ ತಿಳುವಳಿಕೆಗೆ ಇಲ್ಲದೆ ಖಾತೆ ಬದಲಾವಣೆ ಮಾಡಿಕೊಂಡಿದ್ದಲ್ಲಿ, ಆ ಪ್ರಕಾರವಾಗಿ ಖಾತೆಯಾಗಿದ್ದರೂ ಸಹ ಸದರಿ ಖಾತೆಯನ್ನು ಸಕ್ಷಮ ನ್ಯಾಯಾಲಯದಲ್ಲಿ ಈವರೆಗೂ ಪ್ರಶ್ನಿಸಿರುವುದಿಲ್ಲವೆಂಬುದನ್ನು ಪರಿಗಣಿಸಲು ಮತ್ತು ಆ ಕಾರಣದಿಂದ ಸದರಿ ದಾವೆಯು ಕಾಲಪರಿಮಿತಿ ಕಾಯ್ದೆಯಡಿ ಊರ್ಜಿತವಾಗಿರುವುದಿಲ್ಲವೆಂಬುದನ್ನು ಅಂಗೀಕರಿಸಲು ಸಾಧ್ಯವಿರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿ, 4 ನೇ ವಿವಾದಾಂಶವನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

38. 6 **ಮತ್ತು 7 ನೇ ವಿವಾದಾಂಶಗಳುಃ** ಸದರಿ ವಿವಾದಾಂಶಗಳು ಒಂದಕ್ಕೊಂದು ಸಂಬಂದಪಡುವುದರಿಂದ ದಾವಾಂಶಗಳ ಹಾಗೂ ಸಾಕ್ಷ್ಯದ ಪುನರಾವರ್ತನೆಯನ್ನು ತಡೆಯುವ ಉದ್ದೇಶದಿಂದ ಜಂಟಿಯಾಗಿ ಉತ್ತರಿಸಲಾಗಿದೆ.

39. ಸದರಿ ನ್ಯಾಯಾಲಯವು ಮೇಲೆ ಹೇಳಿದ ವಿವಾದಾಂಶಗಳಲ್ಲಿ ನಿರ್ಣಯಿಸಿದ ಕಾರಣಗಳ ಮೇರೆಗೆ ಸದರಿ ವಾದಿಯರು ದಾವಾಸ್ತಿ ಸರ್ವೆ ನಂ.610 ಮತ್ತು 611 ರ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆಂಬುದು ಕಂಡುಬರುತ್ತದೆ. ಆದರೆ ಸದರಿ ಪ್ರತಿವಾದಿಯರು ದಾವಾಸ್ತಿ ಸರ್ವೆ ನಂ.610 ರಲ್ಲಿ ವಾದಿಯರ ಮಾಲೀಕತ್ವದ ಹಕ್ಕನ್ನು

ಹಾಗೂ ಸ್ವಾಧೀನವನ್ನು ಅಲ್ಲಗಳೆಯುವ ಮೂಲಕ ಸದರಿ ಆಸ್ತಿಗೆ ವಾದಿಯರು ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುವುದಿಲ್ಲವೆಂದು ನಿರಾಕರಿಸಿರುತ್ತಾರೆ. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ವಾದಿಯರು ದಾವಾಸ್ತಿಗೆ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುವುದರಿಂದ, ಆ ಪ್ರಕಾರವಾಗಿ ದಾವೆಯಲ್ಲಿ ಕೋರಿದಂತೆ ಮಾಲೀಕತ್ವದ ಹಕ್ಕನ್ನು ಪಡೆಯಲು ಅರ್ಹರಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ.

40. ಅಲ್ಲದೆ ದಾವಾಸ್ತಿ ಸರ್ವೆ ನಂ.610 ವಾದಿಯರ ಸ್ವಾಧೀನದಲ್ಲಿ ಇರುವುದಿಲ್ಲವೆಂಬುದನ್ನು ಪ್ರಶ್ನಿಸಿರುವುದಿಲ್ಲವೆಂಬ ಮೂಲಕ ದಾವಾಸ್ತಿ ಸರ್ವೆ ನಂ.610 ರಲ್ಲಿನ ವಾದಿಯರ ಸ್ವಾಧೀನವನ್ನು ಅಲ್ಲಗಳೆದಿರುತ್ತಾರೆ. ಅಲ್ಲದೆ ಸದರಿ ಡಿ.ಡಬ್ಲೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಈವರೆಗೂ ವಾದಿಯರೇ ದಾವಾಸ್ತಿಯಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಹೀಗಿರುವಲ್ಲಿ ಪ್ರತಿವಾದಿಯರ ಸ್ವಾಧೀನವನ್ನು ಅಂಗೀಕರಿಸಲು ಸಾದ್ಯವಿರುವುದಿಲ್ಲ. ಆದ್ದರಿಂದ ದಾವಾಸ್ತಿಯಲ್ಲಿನ ವಾದಿಯರ ಸ್ವಾಧೀನಾನುಭವಕ್ಕೆ ತೊಂದರೆ ಪಡಿಸದಂತೆ ಪ್ರತಿವಾದಿಯರನ್ನು ಶಾಶ್ವತ ನಿರ್ಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸುವ ಅವಶ್ಯಕತೆ ಇರುತ್ತದೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿದಾಗ, ವಾದಿಯರು ದಾವೆಯಲ್ಲಿ ಕೋರಿದಂತೆ ಪರಿಹಾರ ಪಡೆಯಲು

ಅರ್ಹರಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿ, 6 ಮತ್ತು 7 ನೇ ವಿವಾದಾಂಶಗಳನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.

41. **8 ನೇ ವಿವಾದಾಂಶಃ** 1 ರಿಂದ 7 ನೇ ವಿವಾದಾಂಶಗಳಲ್ಲಿ ತಿಳಿಸಿದ ಕಾರಣಗಳ ಮೇರೆಗೆ ಈ ಕೆಳಕಂಡಂತೆ

**ಆ ದೇ ಶ**

ವಾದಿಯರ ದಾವೆಯನ್ನು ಖರ್ಚು ಸಹಿತ ಡಿಕ್ರಿಗೊಳಿಸಲಾಗಿದೆ.

ಸದರಿ ವಾದಿಯರು ದಾವಾಸ್ತಿ ಸರ್ವೆ ನಂ.610 ರ ವಿಸ್ತೀರ್ಣ 30 ಎಕರೆ 33 ಗುಂಟೆಗಳಿಗೆ ಮತ್ತು ದಾವಾಸ್ತಿ ಸರ್ವೆ ನಂ.611 ರ ವಿಸ್ತೀರ್ಣ 23 ಎಕರೆ 03 ಗುಂಟೆಗಳಿಗೆ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆಂದು ಘೋಷಿಸಲಾಗಿದೆ.

ವಾದಿಯರ ದಾವಾಸ್ತಿಗಳ ಸ್ವಾಧೀನಾನುಭವಕ್ಕೆ ತೊಂದರೆ ಪಡಿಸದಂತೆ 1 ಮತ್ತು 2 ನೇ ಪ್ರತಿವಾದಿಯರನ್ನು ಹಾಗೂ ಅವರ ಜನಸೇವಕರನ್ನು ಅಥವಾ ಪ್ರತಿನಿಧಿಸುವ

ಯಾವುದೇ ವ್ಯಕ್ತಿಗಳು ಇದ್ದಲ್ಲಿ ಅವರನ್ನು ಶಾಶ್ವತ

ನಿರ್ಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚು ಮಾಡಿದ ನಂತರ ಅದನ್ನು ಓದಿ, ತಿದ್ದಿ ಸಹಿ ಮಾಡಿ ಇಂದು ದಿನಾಂಕ 28 ನೇ ಸೆಪ್ಟೆಂಬರ್ 2018 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ)

**(ರಮೇಶ ದುರುಗಪ್ಪ ವಿಕಬೋಟೆ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಅಫಜಲಪೂರ**

## ಅ ನು ಬಂ ಧ

**ವಾದಿಯರ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿಃ**

ಪಿಡಬ್ಲ್ಯೂ-1 ಃ ಬಸ್ಸಣ್ಣಾ ಯಾನೆ ಬಸವರಾಜ ತಂದೆ ಮಡಿವಾಳಪ್ಪ ಧನಶೆಟ್ಟಿ.

ಪಿ.ಡಬ್ಲ್ಯೂ-2 ಃ ಶರಣಪ್ಪಾ ತಂದೆ ಶಾಂತವೀರಪ್ಪಾ.

ಪಿ.ಡಬ್ಲ್ಯೂ-3 ಃ ಸಂಗಪ್ಪಾ ತಂದೆ ನಾಗಪ್ಪ ಬಳಕುಂದೆ

**ಪ್ರತಿವಾದಿಯರ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿಃ**

ಡಿ.ಡಬ್ಲ್ಯೂ-1 ಃ ಶೆಟ್ಟೆಪ್ಪಾ ತಂದೆ ಚಂದ್ರಶ್ಯಾ ಧನಶೆಟ್ಟಿ.

**ವಾದಿಯರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿ.ಪಿ.1 ಃ ಉರ್ದು ಭಾಷೆಯಲ್ಲಿರುವ ಖಾಸರಾ ಪಹಣಿ ಪತ್ರಿಕೆ.

ನಿ.ಪಿ.1 (ಎ) ಃ ನಿ.ಪಿ.1 ರ ಕನ್ನಡ ಅನುವಾದದ ಪ್ರತಿ.

ನಿ.ಪಿ.2 ರಿಂದ 6ಃ ಉರ್ದು ಭಾಷೆಯಲ್ಲಿರುವ ಪಹಣಿ ಪತ್ರಿಕೆಗಳು.

ನಿ.ಪಿ.2 (ಎ) ರಿಂದ 6 (ಎ)ಃ ನಿ.ಪಿ.2 ರಿಂದ 6 ರ ಕನ್ನಡ ಅನುವಾದದ ಪ್ರತಿಗಳು.

ನಿ.ಪಿ.7 ರಿಂದ 76ಃ ಪಹಣಿ ಪತ್ರಿಕೆಗಳು.

ನಿ.ಪಿ.77 ಃ ಮ್ಯುಟೇಶನ ರಿಜಿಸ್ಟರ ಪ್ರತಿ.

ನಿ.ಪಿ.78 ಃ ವಂಶವೃಕ್ಷ

ನಿ.ಪಿ.79 ಃ ಪಂಚಾನಾಮೆಯ ನಕಲು ಪ್ರತಿ.

ನಿ.ಪಿ.80 ಃ ಉರ್ದು ಭಾಷೆಯಲ್ಲಿರುವ ಖರೀದಿ ಪತ್ರದ ಯಥಾ ನಕಲು.

ನಿ.ಪಿ.80 (ಎ) ಃ ನಿ.ಪಿ.80 ರ ಇಂಗ್ಲೀಷ ಅನುವಾದದ ಪ್ರತಿ.

ನಿ.ಪಿ.80 (ಬಿ) ಃ ಅನುವಾದಕರ ಪ್ರಮಾಣ ಪತ್ರ.

ನಿ.ಪಿ.81 ಮತ್ತು 82ಃ ವ್ಯವಸಾಯಗಾರರ ದೃಢೀಕರಣ ಪತ್ರಗಳು.

**ಪ್ರತಿವಾದಿಯರ ಪರವಾಗಿ ವಿಚಾರಿಸಲಾದ ದಾಖಲೆಗಳ ಪಟ್ಟಿಃ**

ನಿ.ಡಿ.1 ರಿಂದ 3ಃ ಪಹಣಿ ಪತ್ರಿಕೆಗಳು.

ನಿ.ಡಿ.4 ಃ ಕೃಷಿ ಪಾಸ ಪುಸ್ತಕ.

ನಿ.ಡಿ.5 ಮತ್ತು 6ಃ ಟೋಂಚ ನಕಾಶೆಗಳು.

ನಿ.ಡಿ.7 ಮತ್ತು 8ಃ ಕಂದಾಯ ಪಾವತಿ ರಸೀದಿಗಳು.

ನಿ.ಡಿ.9 ರಿಂದ 14ಃ ಪಹಣಿ ಪತ್ರಿಕೆಗಳು.

ನಿ.ಡಿ.15 ಃ ಮರಣ ಪ್ರಮಾಣ ಪತ್ರ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಅಫಜಲಪೂರ**